# ಮಹಿಳೆ–ಪುರಾಣ: ಸೃಜನಾತ್ಮಕತೆ–'ಮಾಧವಿ'

**ಡಾ. ಶೈಲಾ ಬ್ಯಾ ಯು.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಕಾಲೇಜು
ಹಂಪನಕಟ್ಟ, ಮಂಗಳೂರು
shailavarma66@gmail.com

ಮಾನವರ ಜಗತ್ತನ್ನು ನಾಗರಿಕತೆಯು ಪ್ರವೇಶಿಸಿದಂದಿನಿಂದಲೇ ಮಹಿಳೆಯ ಸ್ಥಾನವು ಎರಡನೆಯ ದರ್ಜೆಗೆ ಇಳಿದಿದೆ. ಪುರುಷನಿರ್ಮಿತ ಪುರುಷಪ್ರಧಾನ ಸಮಾಜದಲ್ಲಿ ಯಾಜಮಾನ್ಯವು ಪುರುಷವರ್ಗದ ಹಿಡಿತದಲ್ಲೇ ಇರುವಂತಹ ಮತ್ತು ಇರುವ ಹಾಗೆ ಎಲ್ಲರನ್ನು ಒಪ್ಪಿಸುವಂತಹ ಹುನ್ನಾರಗಳನ್ನು ನಂಬಿಕೆಗಳು, ಆಚರಣೆಗಳು, ರೂಢಿಗಳು, ಕಟ್ಟುಕಟ್ಟಳೆಗಳ ರಚನೆಗಳ ಒಳಗೆ ಅಗೋಚರವಾಗಿರುವಂತೆ ಅಡಗಿಸಿಡಲಾಗಿದೆ. ಇದರ ಪರಿಣಾಮವಾಗಿ ಸಹಸ್ರಾರು ವರ್ಷಗಳ ಹಿಂದೆ ನಡೆದಿರಬಹುದಾದ ಘಟನೆಗಳು ಪುರಾಣ, ಇತಿಹಾಸಗಳ ರೂಪದಲ್ಲಿ ಲಿಖಿತ ಹಾಗೂ ಅಲಿಖಿತ ದಾಖಲೆಗಳಲ್ಲೂ ಅವೇ ಸಿದ್ಧಮಾದರಿಗಳನ್ನು ನಮ್ಮ ಮುಂದಿಡುತ್ತ, ಅವನ್ನೇ ಮತ್ತೆ ಮತ್ತೆ ಸ್ಥಾಪಿಸುವ ಹಾಗೂ ಸಮಾಜದ ಮನಸ್ಸಿನಲ್ಲಿ ಅವೇ 'ಸತ್ಯ' ಮತ್ತು ಅವೇ 'ಸರಿ' ಎಂಬಂತೆ ಛಾಪಿಸುವ ಪ್ರಯತ್ನ ಮಾಡುತ್ತಲೇ ಬಂದಿವೆ.

## ಪುರುಷಪ್ರಧಾನ ವ್ಯವಸ್ಥೆ ಮತ್ತು ಮಹಿಳೆ: ವಾಸ್ತವ

ಪುರುಷ ರಾಜಕಾರಣವು ಸೃಷ್ಟಿಸಿರುವ ಪುರಾಣಗಳ ಹಲವು ಮಿಥ್ಯೆಗಳು ಜಾಗೃತ ಮನಸ್ಸುಗಳನ್ನು ಕಾಡಿವೆ. ಅದರಲ್ಲೂ ಉಳಿದೆಲ್ಲರಿಗಿಂತ ಹಲವು ಪಟ್ಟು ಹೆಚ್ಚು ಶೋಷಿತರೂ, ತಮ್ಮದಲ್ಲದ ತಪ್ಪಿಗಾಗಿ ಅಸಹನೀಯವಾದ ನೋವುಣ್ಣಬೇಕಾಗಿ ಬಂದ ಮತ್ತು ಬರುತ್ತಿರುವ ಹೆಣ್ಣುಮಕ್ಕಳನ್ನು ಸುತ್ತುವರಿದಿರುವ ಪುರಾಣವನ್ನು ಭಂಜಿಸುತ್ತಲೇ ಸ್ತ್ರೀಯರ ಕುರಿತಾಗಿ ಇದೇ ಸತ್ಯವೆಂಬಂತೆ ನಂಬಿಸಲಾಗಿರುವ ಪುರುಷನಿರ್ಮಿತ ಮಿಥ್ಯೆಗಳನ್ನು ಬೆತ್ತಲಾಗಿಸಲು ಪ್ರಾಮಾಣಿಕವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಲಾಗುತ್ತಿದೆ.

ಪುರಾಣ ಭಂಜನ ಮತ್ತು ಪುರಾಣದ ಮರುನಿರ್ಮಾಣ ಇಂದು ಹೊಸದಾಗಿ ಉಳಿದಿಲ್ಲ. ಇಲ್ಲಿನ ಪಾತ್ರಗಳನ್ನು ಹೊಸ ದೃಷ್ಟಿಯಲ್ಲಿ ನೋಡುವ ಮತ್ತು ಚಿತ್ರಿಸುವ ಕತೆಗಳನ್ನು ಕನ್ನಡದ ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವೀಣಾ ಶಾಂತೇಶ್ವರ, ವೈದೇಹಿ, ಮಣಿಮಾಲಿನಿ ವಿ.ಕೆ. ಮೊದಲಾದವರು ನೀಡಿದರೆ, ಅನುಪಮಾ ನಿರಂಜನ, ಎಸ್.ಎಲ್.ಭೈರಪ್ಪ, ಎಸ್.ವಿ.ಪ್ರಭಾವತಿಯವರು ಈ ಬಗೆಯ ಕಾದಂಬರಿಗಳನ್ನು ಕೊಟ್ಟಿದ್ದಾರೆ. ರಾಮಾಯಣದ ಊರ್ಮಿಳೆ, ಸೀತೆ, ಮಂಥರೆ; ಮಹಾಭಾರತದ ದ್ರೌಪದಿ, ಶಕುಂತಳೆ, ಮಾಧವಿ ಮೊದಲಾದ

DOI: 10.59176
http://www.kristujayantijournal.com/index.php/KJKSP

ಅಲಕ್ಷಿತ ಪಾತ್ರಗಳನ್ನು ಅವರೆಲ್ಲ ಹೊಸಬೆಳಕಿನಲ್ಲಿ ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ಅನುಪಮಾ ನಿರಂಜನ ಅವರಂತೆ ಪುರಾಣವನ್ನು ಸ್ತ್ರೀವಾದಿ ನೆಲೆಯಲ್ಲಿ ಚಿತ್ರಿಸುವ ಸಾಲಿಗೆ ಎಂ.ಎಸ್.ವೇದಾ ಅವರು ಯುವಪೀಳಿಗೆಯ ಸೇರ್ಪಡೆಯಾಗಿದ್ದಾರೆ. ಪುರಾಣದ ಕಥೆಯನ್ನು ವಸ್ತುವಾಗಿ ಬಳಸಿರುವುದು ಮತ್ತು ಅದನ್ನು ಮರುನಿರ್ಮಿಸಿರುವುದು ಇಲ್ಲಿನ ಮುಖ್ಯ ಅಂಶ.

**ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಮತ್ತು ಪ್ರಸ್ತುತ ಸಂಶೋಧನಾ ಲೇಖನದ ವಿಮರ್ಶಾ ವಿಧಾನ**

ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಹಿನ್ನೆಲೆಯಲ್ಲಿ ವಿವರಿಸಿಕೊಳ್ಳುವುದಾದರೆ, ರಾಚನಿಕೋತ್ತರ ಚಿಂತನೆಯ ಪ್ರತಿಪಾದಕನಾದ ಜಾಕ್ವೆಸ್ ಡೆರಿಡಾನ ಪ್ರತಿಪಾದನೆಯನ್ನು ಗಮನಿಸಬೇಕು. ಅವನ ಪ್ರಕಾರ, ಬೇರೆ ಬೇರೆ ಕೋನದಲ್ಲಿ ನಿಂತು ಓದುವಾಗ ಭಾಷೆ ಅಥವಾ ಕಥಾನಕಗಳಲ್ಲಿ ಈವರೆಗೆ 'ಕಾಣದೆ ಇರುವ' 'ಕುರುಡುದಾಣ' (ಃಟುಟಿಜ ಔಠಣ) ಗಳು ಪತ್ತೆಯಾಗಿ ಅವನ್ನು ಮರುಓದುವ ಮತ್ತು ಮರುಬರೆಯುವ ಕೆಲಸ ನಡೆಯುತ್ತದೆ. ಯಾವುದೇ ಪಠ್ಯಕ್ಕೆ 'ಒಂದು ಕೇಂದ್ರ' ಅಥವಾ 'ಒಂದು ಧ್ವನಿ' ಇರುವುದಿಲ್ಲ. ಆ ಪಠ್ಯವನ್ನು ಬಿಚ್ಚಿ–ಸೇರಿಸಿ–ಕೆಡವಿ–ಕಟ್ಟುವ ಪ್ರಕ್ರಿಯೆಯೇ 'ನಿರಚನೆ' ಅಥವಾ ಆಜಛಿಔಟಿಣಡಿಣಛಿಣುಔಟಿ. ಭಾರತೀಯ ಸಂದರ್ಭದ ಪುರಾಣದ ಕಥೆಗಳು ಮತ್ತು ಪಾತ್ರಗಳ ಪುನರ್‌ಸೃಷ್ಟಿಯನ್ನು ಈ ನೆಲೆಯಲ್ಲಿ ಅರ್ಥೈಸಬಹುದಾಗಿದೆ.

ಮಹಾಭಾರತದಂತಹ ಸುದೀರ್ಘ ಕಾವ್ಯದಲ್ಲಿ ಒಂದು ಬಿಂದುಮಾತ್ರವಾಗಿರುವ ಪಾತ್ರ 'ಮಾಧವಿ'ಯ ಕುರಿತಾಗಿ ಡಾ.ಅನುಪಮಾ ನಿರಂಜನ ಅವರ 'ಮಾಧವಿ' ಹಾಗೂ ಎಂ.ಎಸ್.ವೇದಾ ಅವರ 'ಕಪ್ಪುಕಿವಿಯ ಬಿಳಿಯ ಕುದುರೆಗಳು' ಕಾದಂಬರಿಗಳಲ್ಲದೆ, ಗುಲ್ಶನ್ ನಂದಾ ಅವರ ಹಿಂದಿ ಕಾದಂಬರಿ 'ಮಾಧವಿ' ಮತ್ತು ಭೀಷ್ಮ ಸಾಹನಿಯವರ ಹಿಂದಿ ನಾಟಕ 'ಮಾಧವಿ' ಪ್ರಕಟವಾಗಿವೆ. ಗುಲ್ಶನ್ ನಂದಾ ಮತ್ತು ಭೀಷ್ಮ ಸಾಹನಿಯವರ ಕೃತಿಗಳು ವಸ್ತು ಮತ್ತು ಅದರ ನಿರ್ವಹಣೆಯಲ್ಲಿ ಮೂಲಕಥೆಯಿಂದ ಬೇರೆ ಆಗಿಲ್ಲ. ಅವರಿಬ್ಬರೂ ಮೂಲಕಥೆಯಲ್ಲಿ ಒಂದು ಪುಟ್ಟ ಪಾತ್ರವಾಗಿರುವ ಮಾಧವಿಯನ್ನು ಪ್ರಧಾನವಾಗಿಟ್ಟುಕೊಂಡು ಆಕೆಯ ನೋವನ್ನು ಗುರುತಿಸಿದ್ದಾರೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಅದನ್ನು ಹೊರತುಪಡಿಸಿದರೆ ಬೇರೆ ಕ್ರಾಂತಿಕಾರಕ ಬದಲಾವಣೆಗಳು ಈ ಎರಡೂ ಕೃತಿಗಳಲ್ಲಿ ಕಾಣಿಸುವುದಿಲ್ಲ. ಆದ್ದರಿಂದ ಇಲ್ಲಿ ಡಾ. ಅನುಪಮಾ ನಿರಂಜನ ಹಾಗೂ ಎಂ.ಎಸ್.ವೇದಾ ಅವರ ಕಾದಂಬರಿಗಳಿಗೆ ಹೆಚ್ಚು ಒತ್ತು ಕೊಡಲಾಗಿದೆ.

**ಅನುಪಮಾ ನಿರಂಜನ ಹಾಗೂ ಎಂ.ಎಸ್. ವೇದಾ ಅವರ ಕಾದಂಬರಿಗಳ ಮಾಧವಿ: ಸಂಕ್ಷಿಪ್ತ ತುಲನಾತ್ಮಕ ನೋಟ**

ಇದುವರೆಗೆ ಹದಿನೈದು ಮುದ್ರಣಗಳನ್ನು ಕಂಡಿರುವ ಡಾ.ಅನುಪಮಾ ನಿರಂಜನ ಅವರ 'ಮಾಧವಿ' ಕಾದಂಬರಿ ಪ್ರಕಟವಾದದ್ದು ೧೯೭೬ರಲ್ಲಿ. ಅವರೇ ಹೇಳುವಂತೆ, ಈ ಕಾದಂಬರಿಯ ಬರವಣಿಗೆಗೆ ಖ್ಯಾತ ಸಮಾಜವಿಜ್ಞಾನಿ ಶ್ರೀಮತಿ ಇರಾವತಿ ಕರ್ವೆ ಅವರ 'ಯುಗಾಂತ' ಕೃತಿ ಪ್ರೇರಣೆಯಾಗಿದೆ. ಅದೇ ರೀತಿ, ಪ್ರಾಚೀನ ಭಾರತವನ್ನು ಕುರಿತು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ರಚನೆಯಾದ ವಾಸ್ತವವಾದಿ ಚಿತ್ರಣದ ಶ್ರೀಪಾದ ಡಾಂಗೆ

DOI: 10.59176
http://www.kristujayantijournal.com/index.php/KJKSP

ಅವರ India from Primitive Communism to slavery ಎಂಬ ಕೃತಿಯಲ್ಲಿ ಉಲ್ಲೇಖಗೊಂಡ "ಊಳಿಗಮಾನ್ಯ ಸಮಾಜವ್ಯವಸ್ಥೆಯಲ್ಲಿ ಹೆಂಗಸನ್ನು ಕೊಳ್ಳುವುದು, ಮಾರುವುದು, ದಾನ ಮಾಡುವುದು ಸಾಧಾರಣ ಪದ್ಧತಿಯಾಗಿತ್ತು. ಯಯಾತಿ ತನ್ನ ಮಗಳನ್ನು ಈ ರೀತಿ ಬಾಡಿಗೆಗೆ ಕೊಟ್ಟುದು ಮಹಾಭಾರತದ 'ಉದ್ಯೋಗ ಪರ್ವ'ದಲ್ಲಿ ಗಾಲವಋಷಿಯ ಕಥೆಯಲ್ಲಿ ಚಿತ್ರಿತವಾಗಿದೆ" ಎಂಬ ವಿಚಾರಗಳು ಅನುಪಮಾ ಅವರು ಮಾಧವಿಯನ್ನು ನಾಯಕಿಯನ್ನಾಗಿ ಮಾಡಿಕೊಳ್ಳಲು ಕಾರಣವಾದವು. ಮಾಧವಿಯು ಶೋಷಿತ ಹೆಣ್ಣಿನ ಸಂಕೇತವಾಗಿ ಅನುಪಮಾ ಅವರಿಗೆ ಕಾಣಿಸಲು, ಅವರು ಓರ್ವ ವೈದ್ಯೆಯಾಗಿ ಮನುಷ್ಯರ ಮನೋದೈಹಿಕ ಅಂತರ್‌ಸಂಬಂಧವನ್ನು ಅಭ್ಯಾಸ ಮಾಡಿರುವುದೂ ಒಂದು ಕಾರಣವಿರಬಹುದು.

ಮಹಾಭಾರತದ ಉದ್ಯೋಗಪರ್ವದ ೧೧೪, ೧೧೭, ೧೧೮, ೧೧೯ ಮತ್ತು ೧೨೦–ಈ ಕೇವಲ ಐದು ಶ್ಲೋಕಗಳಲ್ಲಿ ಉಲ್ಲೇಖವಾಗಿರುವ ಮಾಧವಿ ಮಹಾಭಾರತ ಕಾವ್ಯದಲ್ಲಿ ಒಂದು ಬಿಂದು ಮಾತ್ರ. ಕ್ರಿ.ಪೂ. ೧,೦೦೦ದಲ್ಲಿ ನಡೆದಿರಬಹುದಾದ ದಾಯಾದಿ ಕಲಹದ ಮಹಾಭಾರತ ಕಥೆಯಲ್ಲಿ ಮಾಧವಿಯದು ಒಂದು ಉಪಕಥೆ. ಗಾಲವಮುನಿ ತನ್ನ ಗುರು ವಿಶ್ವಾಮಿತ್ರರನ್ನು ತನ್ನಿಂದ ಗುರುದಕ್ಷಿಣೆಯನ್ನು ಪಡೆಯುವಂತೆ ಕೇಳಿಕೊಳ್ಳುತ್ತಾನೆ. ಅವರು ಬೇಡವೆಂದು ನಿರಾಕರಿಸಿದರೂ ಅವನು ಒತ್ತಾಯಿಸಿದಾಗ ಅವರು ಅನಗತ್ಯವಾಗಿ, ಇಡೀ ದೇಹ ಬಿಳಿಯಾಗಿದ್ದು, ಒಂದು ಕಿವಿ ಮಾತ್ರ ಕಪ್ಪಗಿರುವ ಎಂಟುನೂರು ಕುದುರೆಗಳನ್ನು ದಕ್ಷಿಣೆಯಾಗಿ ಕೊಡೆಂದು ಆದೇಶಿಸುತ್ತಾರೆ. ಅದನ್ನು ಪಡೆಯಲು ಗಾಲವಮುನಿಯು ಮಹಾರಾಜ ಯಯಾತಿಯ ಬಳಿಗೆ ಬರುತ್ತಾನೆ. ಆದರೆ ಆವೇಳೆಗೆ ತನ್ನ ವೈಭೋಗದ ಬದುಕಿನಿಂದಾಗಿ ಸಾಂಪತ್ತಿಕವಾಗಿ ಅವನತಿಯ ಹಾದಿಯಲ್ಲಿದ್ದ ಯಯಾತಿ ಅದನ್ನು ತೋರ್ಪಡಿಸದೆ, ತನ್ನ ಪೊಳ್ಳು ಪ್ರತಿಷ್ಠೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಗಾಲವ ಕೇಳಿದ್ದನ್ನು ಸಂಪಾದಿಸಿ ಕೊಡಲು ಮೂಲಧನವಾಗಿ ತನ್ನ ಮಗಳಾದ ಮಾಧವಿಯನ್ನು ಅವನೊಂದಿಗೆ ಕಳುಹಿಸಿಕೊಡುತ್ತಾನೆ. ಮುಂದೆ ಆಕೆ ತಲಾ ಇನ್ನೂರು ಕುದುರೆಗಳಿಗಾಗಿ ಹರ್ಯಶ್ವ, ದಿವೋದಾಸ, ಉಶೀನರ ಹಾಗೂ ವಿಶ್ವಾಮಿತ್ರರ ಜೊತೆ ಅವರಿಗೆ ಪುತ್ರಸಂತಾನವನ್ನು ಹೆತ್ತುಕೊಡುವತನಕ ಬದುಕಬೇಕಾಗುತ್ತದೆ. ಮತ್ತೆ ಹಿಂದಿರುಗಿ ಬರುವ ವೇಳೆಗೆ ಆಕೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಜೀವಚ್ಛವವಾಗಿರುತ್ತಾಳೆ, ಇದು ಕಥೆ.

ಆದಿಮಾನವರಲ್ಲಿ ಕುಟುಂಬವು ಪ್ರಧಾನವಾಗಿತ್ತು. ಆಸ್ತಿ ಹಾಗೂ ಅದರ ಸಂಗ್ರಹದ ಪರಿಕಲ್ಪನೆ ಹುಟ್ಟಿಕೊಂಡಂತೆ ಸ್ತ್ರೀಯು ಪುರುಷನ ಆಸ್ತಿ' ಎಂಬ ಭಾವನೆ ಬಲವಾಗಿ ಬೆಳೆಯಿತು. ಹೆಣ್ಣು ಆದರ್ಶ ಮಹಿಳೆ ಎನಿಸಿಕೊಳ್ಳಬೇಕೆಂದರೆ ಆಕೆ ಗಂಡಸಾದವನಿಗೆ ತ್ಯಾಗ, ವಿಧೇಯತೆಯಿಂದ ಶರಣಾಗಬೇಕು. ಪ್ರಶ್ನಿಸುವ, ದಂಗೆಯೇಳುವ ಪ್ರವೃತ್ತಿಯನ್ನು ತೋರುವ ಹೆಣ್ಣಿನ ವಿರುದ್ಧ ಇಡೀ ಸಮಾಜವೇ ಮುಗಿಬೀಳುತ್ತಿತ್ತು. ಹೆಣ್ಣನ್ನು ಭೂಮಿಗೆ ಹೋಲಿಸುವ ಮೂಲಕ, ಕ್ಷೇತ್ರ ಎಂದು ಬಿಂಬಿಸಿ ಮೌಲ್ಯಗಳನ್ನು ಸಂಕುಚಿತಗೊಳಿಸಿ, ಅವಳ ಮೇಲೆ ಅಧಿಕಾರ ಚಲಾಯಿಸಿ, ಅವಳೆಲ್ಲ ಚಲನವಲನಗಳನ್ನು ನಿಯಂತ್ರಿಸಿ, ಕುಟುಂಬದ ಒಳಗೆ ಮತ್ತು ಹೊರಗೆ–ಎರಡೂ

DOI: 10.59176
http://www.kristujayantijournal.com/index.php/KJKSP

ಕಡೆಗಳಲ್ಲಿ ಅಧಿಕಾರರಹಿತಳನ್ನಾಗಿ, ಧ್ವನಿಯಿಲ್ಲದ ಜೀವಿಯನ್ನಾಗಿ ಮಾಡಲಾಯಿತು. ಆಕೆಗೆ ತನ್ನ ಮೇಲೂ ತನಗೆ ಅಧಿಕಾರ ಇಲ್ಲದೆ ಹೋಯಿತು.

ಅದರಂತೆಯೇ ಅನುಪಮಾ ಹಾಗೂ ವೇದಾ ಅವರ ಕಾದಂಬರಿಗಳಲ್ಲಿ ಮಾಧವಿ ಕೇವಲ ಯಾರದೋ ಕಾಮದಾಹವನ್ನು ತಣಿಸಬೇಕಾದ ಹೆಣ್ಣು ದೇಹಮಾತ್ರವಾಗಿ, ಉತ್ತರಾಧಿಕಾರಕ್ಕಾಗಿ ಸಂತಾನವನ್ನು ಹೊತ್ತು, ಹೆತ್ತು ಕೊಡಬೇಕಾದ, ಮನಸ್ಸೆಂಬುದೇ ಇಲ್ಲದ ಒಂದು ಯಂತ್ರವಾಗಿ ಬಳಕೆಯಾಗಿದ್ದಾಳೆ. ಅನುಪಮಾ ಅವರ ಮಾಧವಿಯು ಯಯಾತಿ ಮಹಾರಾಜನ ಒಬ್ಬ ರಾಣಿಯ ಹೊಟ್ಟೆಯಲ್ಲಿ ಹುಟ್ಟಿದ ರಾಜಕುಮಾರಿಯಾಗಿದ್ದೂ ಶೋಷಣೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಅವಳ ತಾಯಿ ಆಕೆ ಹುಟ್ಟಿದಾಗಲೇ ತೀರಿಹೋದಳೆಂಬುದು ಕಥೆ. ಒಂದೊಮ್ಮೆ ಆಕೆ ಬದುಕಿದ್ದರೂ ಮಗಳು ಮಾಧವಿಯ ಬದುಕಿನ ದುರಂತವನ್ನು ತಪ್ಪಿಸುವ ಸಾಮರ್ಥ್ಯ ಆಕೆಗಿರುತ್ತಿತ್ತು ಎನ್ನಲಾಗದು. ವರ್ತಮಾನದ ಸಮಾಜದಲ್ಲಿ ಕೂಡ ಎಷ್ಟೋ ಹೆಣ್ಣುಮಕ್ಕಳು ತಮ್ಮ ತಂದೆಯಿಂದಲೇ ದೌರ್ಜನ್ಯಕ್ಕೆ ಒಳಗಾಗುತ್ತಿದ್ದರೂ ಅದನ್ನು ತಪ್ಪಿಸಲಾಗದ ಅಸಹಾಯಕ ತಾಯಂದಿರಿರುವುದನ್ನು ನಾವು ಕಾಣುತ್ತಿರುತ್ತೇವೆ.

ಅನುಪಮಾ ಅವರು ಆ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಅಧ್ಯಯನ ಮಾಡುವುದರ ಜೊತೆಗೆ ವೈಜ್ಞಾನಿಕ ಸತ್ಯಗಳಿಗೆ ಮಾತ್ರವೇ ಬದ್ಧರಾಗಿ ತಮ್ಮ ಕಾದಂಬರಿಯನ್ನು ರಚಿಸಿದ್ದಾರೆ. ಹಾಗಾಗಿ ಮೂಲಕಥೆಯಲ್ಲಿರುವ, ಗಂಡು ತಾನು ಹೆಣ್ಣಿನ ಮೇಲೆ ಎಸಗುವ ಎಲ್ಲ ಅನ್ಯಾಯಗಳ ಅಪವಾದದಿಂದ ಪಾರಾಗಲು ಸೃಷ್ಟಿಸಿಕೊಂಡ ಅತಿಮಾನವ ದೈವೀ ಅಂಶಗಳನ್ನು ಕೈಬಿಟ್ಟಿದ್ದಾರೆ. ಇದಕ್ಕೆ ಮೂಲಕಥೆಯಲ್ಲಿ ಮಾಧವಿಗೆ ದೊರೆಯುವ ಕನ್ಯತ್ವದ ವರ ಮತ್ತು ದಿವೋದಾಸ ಮಹಾರಾಜನ ಯಜ್ಞಪ್ರಸಾದದ ಪಾಯಸ ಕುಡಿಯುವ ಹೆಣ್ಣುಮಕ್ಕಳಿಗೆ ಮಕ್ಕಳಾಗುವ ಘಟನೆಗಳು ನಿದರ್ಶನವಾಗಿವೆ. ಕಾದಂಬರಿಯ ಕೊನೆಯಲ್ಲಿ ಎಲ್ಲರಿಂದ ದೂರ ಹೋಗುವ ಮಾಧವಿಯ ತೀರ್ಮಾನವನ್ನು ಕಾದಂಬರಿಕಾರ್ತಿ 'ಎಲ್ಲ ಕಾಲದ ಶೋಷಿತ ಮಹಿಳೆಯರ ಪ್ರತಿನಿಧಿಯಾಗಿ ಇದು ಮಾಧವಿಯ ಬಂಡಾಯ' ಎಂಬುದಾಗಿ ವಿವರಿಸಿದ್ದಾರೆ. ವೇದಪಾರಂಗತರಾದ, ಕಾಮನೆಗಳ ಮೇಲೆ ನಿಯಂತ್ರಣ ಸಾಧಿಸಿದವರೆನ್ನಲಾಗುವ ಋಷಿಗಳೂ ಮಾನವಸಹಜ ದೌರ್ಬಲ್ಯದಿಂದ ಪಾರಾದವರಲ್ಲ ಎಂಬುದನ್ನು ವಿಶ್ವಾಮಿತ್ರನ ಪಾತ್ರದ ಮೂಲಕ ಸಾಬೀತುಮಾಡುವ ಅನುಪಮಾ ಯಾರನ್ನೂ ಆದರ್ಶವ್ಯಕ್ತಿಗಳನ್ನಾಗಿ ಚಿತ್ರಿಸಿಲ್ಲ. ಅನುಪಮಾ ಅವರ ಈ ಕಾದಂಬರಿಯ ಇನ್ನೊಂದು ವಿಶೇಷತೆ ಆಡುಭಾಷೆಯ ಬಳಕೆ. ಭಾಷೆಯ ಬಳಕೆಯಲ್ಲೂ ಲಿಂಗರಾಜಕಾರಣ ಹಾಗೂ ಯಾಜಮಾನ್ಯದ ಹಿಡಿತವಿರುವುದನ್ನು ಗುರುತಿಸುವ ಅವರು ಅದನ್ನು ಬಿಟ್ಟು ಸಾಮಾನ್ಯ ಜನರ ಆಡುಭಾಷೆಯನ್ನು ಬಳಸಿದ್ದಾರೆ.

**ಕಪ್ಪು ಕಿವಿಯ ಬಿಳಿಯ ಕುದುರೆಗಳು: ಮಹಿಳಾ ಶೋಷಣೆಯ ಹಲವು ಮುಖಗಳ ಅನಾವರಣ**

ಎಂ.ಎಸ್.ವೇದಾ ಅವರು ನಮ್ಮ ನಡುವಿನ ಯುವ ಬರಹಗಾರ್ತಿಯರಲ್ಲಿ ಒಬ್ಬರು. ಬದಲಾಗುತ್ತಿರುವ ಕಾಲ, ಎದುರಾಗುತ್ತಿರುವ ಎಲ್ಲ ಬಗೆಯ ಸಾಂಸ್ಕೃತಿಕ, ಸಾಮಾಜಿಕ ಬಿಕ್ಕಟ್ಟುಗಳ ನಡುವೆಯೂ ಉಳಿದುಕೊಂಡಿರುವ

ಅತ್ಯಂತ ಸಂವೇದನಾಶೀಲ ಬರಹಗಾರ್ತಿಯರಲ್ಲಿ ಪ್ರಮುಖರಾಗಿ ಗುರುತಿಸಿಕೊಂಡಿದ್ದಾರೆ. ೨೦೦೭ರಲ್ಲಿ ಪ್ರಕಟವಾದ ಅವರ **ಕಪ್ಪು ಕಿವಿಯ ಬಿಳಿಯ ಕುದುರೆಗಳು** ಅದೇ ಮಾಧವಿಯ ಬದುಕನ್ನು ಮತ್ತೆ ತೆರೆದಿಟ್ಟಿತು. ಅನುಪಮಾ ನಿರಂಜನ ಅವರ ಕಾದಂಬರಿ **ಮಾಧವಿ**ಯಲ್ಲಿ ರಾಜಕುಮಾರಿಯಾಗಿ ಕಾಣಿಸಿಕೊಳ್ಳುವ ಮಾಧವಿ ಇಲ್ಲಿ ದಾಸಿ ಲಕ್ಷ್ಮಿಯ ಮಗಳಾಗಿ ಎದುರಿಸಬೇಕಾಗಿ ಬಂದ ಕರಾಳವಾದ ಭವಿಷ್ಯವನ್ನು ವೇದಾ ಅವರು ಹೊಸತಾಗಿ ನಿರ್ವಚಿಸಿದ್ದಾರೆ. ಅಲ್ಲದೆ ಅವರು ಇಲ್ಲಿ **'ಆದಿಮ'** ಎಂಬ ವಿಶೇಷವಾದ ಮಹತ್ವ ಇರುವ ಮಾಧವಿಯ ಬಾಲ್ಯದ ಸಖನ ಪಾತ್ರವನ್ನು ಸೃಷ್ಟಿಸಿದ್ದಾರೆ. ಪುರಾಣವಾಗಲಿ ಚರಿತ್ರೆಯಾಗಲಿ ಗಮನಿಸದಿರುವ ಮಾಧವಿ ಮತ್ತು ಆದಿಮರ ತಾಯಂದಿರು ಇಲ್ಲಿ ಮುಖ್ಯರಾಗಿದ್ದಾರೆ. ಹೆಣ್ಣುಗಳ ನಡುವೆ ದ್ವೇಷವನ್ನೇ ಬಿತ್ತುವಂತೆ ಚಿತ್ರಿತರಾಗಿರುವ ದೇವಯಾನಿ, ಶರ್ಮಿಷ್ಠೆಯರು ಕಾಲಾಂತರದಲ್ಲಿ ದ್ವೇಷ ಮರೆತು ಒಂದಾಗುತ್ತಾರೆ. ಈ ಕಾದಂಬರಿಯನ್ನು ಎರಡು ಆಯಾಮಗಳಲ್ಲಿ ಗಮನಿಸಬಹುದಾಗಿದೆ. ಮೊದಲನೆಯದು ಕಾದಂಬರಿಯ ಹೊರಾವರಣಕ್ಕೆ ಸಂಬಂಧಿಸಿದ್ದರೆ, ಎರಡನೆಯದು ಅದರ ವಸ್ತು, ಪಾತ್ರಗಳು, ಅವುಗಳ ಲೋಕದೃಷ್ಟಿ ಮತ್ತು ಸ್ತ್ರೀವಾದಿ ಮನಸ್ಸೊಂದು ಅದನ್ನು ಮರುನಿರ್ವಚಿಸಿದ ಬಗೆಗೆ ಸಂಬಂಧಿಸಿದೆ.

**ಪರಂಪರಾಗತ ನೆಲೆ:** ತನ್ನ ಭವಿಷ್ಯದ ಕುರಿತು ಕನಸುಗಳನ್ನು ಕಟ್ಟಿಕೊಂಡಿದ್ದ ಹುಡುಗಿ, ಅರಮನೆಯ ಅಂತಃಪುರದ ಬಾಗಿಲು ಕಾಯುವ ಒಬ್ಬ ಸಾಮಾನ್ಯ ದಾಸಿ ಲಕ್ಷ್ಮಿಯ ಮೇಲೆ ಅರಸ ಯಯಾತಿ ನಡೆಸಿದ ಕ್ಷಣಮಾತ್ರದ ಲೈಂಗಿಕ ಆಕ್ರಮಣದ ಪರಿಣಾಮವಾಗಿ ಮಾಧವಿ ಜನಿಸುತ್ತಾಳೆ. ಯಾವಾಗಲೂ ಒಂದು ಬಗೆಯ ಭಯ, ಆತಂಕದ ಸ್ಥಿತಿಯಲ್ಲೇ ಲಕ್ಷ್ಮಿ ದಿನಗಳನ್ನು ಕಳೆಯುತ್ತಿರುತ್ತಾಳೆ. ಮಾಧವಿ ಹರಯವನ್ನು ತಲುಪುವ ಸಮಯಕ್ಕೆ ತನ್ನ ಹುಟ್ಟು ಮತ್ತು ತನ್ನ ತಾಯಿಯ ಮಾನಸಿಕ ಸ್ಥಿತಿಗೆ ಆದಿಮನ ತಾಯಿ ಪಾರ್ವತಿಯಿಂದ ಕಾರಣ ತಿಳಿಯುತ್ತಾಳೆ. ಅದೇ ಕಾಲಕ್ಕೆ ಆಕೆ ತನ್ನ ಎಳವೆಯ ಒಡನಾಡಿ ಆದಿಮನಲ್ಲಿ ತನಗೆ ಮೂಡಿದ ಅನುರಕ್ತಿಯನ್ನು ಪ್ರಕಟಿಸುತ್ತಾಳೆ. ಆದರೆ ಅದನ್ನು ಅಧಿಕೃತಗೊಳಿಸುವ ಮುನ್ನವೇ, ಆಕೆ ನೆಪಮಾತ್ರದ ತಂದೆಯಾದ ಅರಸ ಯಯಾತಿಯ ವೈಯಕ್ತಿಕ ಸ್ವಾರ್ಥದ ಅಧಿಕಾರ ರಾಜಕಾರಣಕ್ಕೆ ಬಲಿಯಾಗಬೇಕಾಗುತ್ತದೆ. ತಾಯಿ ಲಕ್ಷ್ಮಿ ಅನುಭವಿಸುತ್ತಿರುವ ಅಸಹಾಯಕತೆಯ ಮುಂದುವರಿಕೆಯೆಂಬಂತೆ, ಅರಸ ಯಯಾತಿಯ ಆಣತಿಯ ಪ್ರಕಾರ ಮಾಧವಿ ವಿಶ್ವಾಮಿತ್ರನ ಶಿಷ್ಯ ಗಾಲವನಿಗೆ ದಾನವಾಗಬೇಕಾಗುತ್ತದೆ. ಇದನ್ನು ತಪ್ಪಿಸಲು ಅರಮನೆಯಲ್ಲಿ ಸ್ವತಃ ರಾಣಿ ದೇವಯಾನಿ, ಶರ್ಮಿಷ್ಠೆಯರು ಮತ್ತು ತಂದೆ ಯಯಾತಿಗೆ ತನ್ನ ಯೌವನವನ್ನು ಧಾರೆಯೆರೆದ ಮಗ ಪುರು ನಡೆಸುವ ಎಲ್ಲ ಪ್ರಯತ್ನಗಳೂ ನಿಷ್ಫಲವಾಗುತ್ತವೆ.

**ಗಂಡು–ಹೆಣ್ಣು: 'ಸ್ನೇಹ'ದ ನೆಲೆ:** ಗಂಡು–ಹೆಣ್ಣಿನ ಸಂಬಂಧದ ಕುರಿತು ಯಾವುದೇ ಸ್ಪಷ್ಟ ಕಲ್ಪನೆಗಳಿಲ್ಲದ ಮಾಧವಿಗೆ ಆ ಹರಯದಲ್ಲಿ ಇದ್ದ ತಿಳುವಳಿಕೆಯೂ ಆದಿಮನ ವ್ಯಕ್ತಿತ್ವ ಮತ್ತು ಒಡನಾಟದ ಕಾರಣದಿಂದ ಅಸ್ಪಷ್ಟವೂ ಮಧುರವೂ ಆದ ಅನುಭೂತಿಯಾಗಿರುತ್ತದೆ. ಆದರೆ ಅಂತಹ ಜಗತ್ತೊಂದನ್ನು ಪ್ರವೇಶಿಸುವುದಕ್ಕೂ ಮುನ್ನವೇ ಅವಳಿಗಾಗಿ ಕರಾಳ ಜಗತ್ತೊಂದು ಕಾದಿರುತ್ತದೆ. ಅಷ್ಟೂ ಕುದುರೆಗಳು ಒಬ್ಬರಲ್ಲೇ ಗಾಲವನಿಗೆ ಸಿಗದಿದ್ದಾಗ, ಅವಳು

DOI: 10.59176
http://www.kristujayantijournal.com/index.php/KJKSP

ನಾಲ್ವರೊಂದಿಗೆ ತನ್ನ ಬದುಕಿನ ಅಮೂಲ್ಯ ಕಾಲವನ್ನು, ಮನಸ್ಸನ್ನು ಕಳೆದುಕೊಳ್ಳಬೇಕಾಗುತ್ತದೆ. ಮಧ್ಯವಯಸ್ಕ ಹರ್ಯಶ್ವ ಮಹಾರಾಜ, ದಿವೋದಾಸ ರಾಜ, ಉಶೀನರ ಮತ್ತು ತಂದೆಯ ವಯಸ್ಸಿನ ವಿಶ್ವಾಮಿತ್ರನಂಥವರು ಅವಳ ಮೇಲೆ ಎಸಗುವ ಆಕ್ರಮಣಗಳು ಈ ಸಂಬಂಧವನ್ನು ಅತ್ಯಂತ ಅಸಹ್ಯಕರವೂ ಅಮಾನವೀಯವೂ ಆಗಿಸುತ್ತವೆ. ಅವಳ ಕಲ್ಪನೆಗಳೆಲ್ಲವೂ ಧೂಳೀಪಟವಾಗುತ್ತವೆ. ಗಾಲವ ಇವರೊಂದಿಗೆ ಮಾಡಿಕೊಂಡ ಕರಾರಿನಂತೆ, ಮಾಧವಿ ಒಬ್ಬೊಬ್ಬರ ಜೊತೆಗೂ ಒಂದೊಂದು ವರ್ಷ ಕಾಲ ಇದ್ದು, ಅವರ ಲೈಂಗಿಕ ಅಪೇಕ್ಷೆಗಳಿಗೆ ಆಹಾರವಾಗಿ ಒಂದೊಂದು ಗಂಡುಮಗುವನ್ನು ಹೆತ್ತುಕೊಟ್ಟು, ಗಾಲವನಿಗೆ ಎಂಟುನೂರು ಕಪ್ಪು ಕಿವಿಯ ಬಿಳಿಯ ಕುದುರೆಗಳನ್ನು ಸಂಪಾದಿಸಿಕೊಟ್ಟು, ತನ್ನನ್ನು ಕಾದಿರಬಹುದಾದ ತಾಯಿಯ ಬಳಿಗೆ ಮರಳುತ್ತಾಳೆ. ಬಾಲ್ಯದ ಗೆಳೆಯ, ಒಡನಾಡಿಯಾಗಿದ್ದ ಆದಿಮನನ್ನು ಸಂಗಾತಿಯಾಗಿಸಿಕೊಳ್ಳಲು ಒಪ್ಪದೆ ಒಡನಾಡಿಯಾಗಿಯೇ ಉಳಿಸಿಕೊಳ್ಳುತ್ತಾಳೆ. ಇದು ವೇದಾ ಅವರ ಕಥೆಯ ಮುಖ್ಯಾಂಶ.

**ಗಂಡು–ಹೆಣ್ಣು: 'ಸ್ನೇಹ'ಕ್ಕೆ ಹೊಸಭಾಷ್ಯ:** ಗಂಡು–ಹೆಣ್ಣಿನ ಆರೋಗ್ಯಕರವಾದ ಸಂಬಂಧದ, ಮಾನವೀಯ ಮೌಲ್ಯವುಳ್ಳ ಸಮಾಜವೊಂದರ ಅವಶ್ಯಕತೆಯನ್ನು ಕಾದಂಬರಿ ಧ್ವನಿಸುತ್ತದೆ. ಹೆಣ್ಣನ್ನು ನೋಡುವ ದೃಷ್ಟಿಕೋನದಲ್ಲೇ ಮಾರ್ಪಾಡುಗಳಾಗಬೇಕು; ಪ್ರೀತಿ, ಪ್ರೇಮ, ತ್ಯಾಗ, ಸಹನೆ, ಮಾನವೀಯತೆ ಮೊದಲಾದ ಮೌಲ್ಯಗಳು ಲಿಂಗಾತೀತವಾಗಬೇಕು. ಆಗ ಮಾತ್ರವೇ ಇಂತಹ ಸಮಾಜ ನಿರ್ಮಾಣ ಸಾಧ್ಯ ಎಂಬುದು ಇಲ್ಲಿ ಪ್ರತಿಪಾದಿತವಾದ ಅಂಶ. ಪುರುಷಶಾಹಿಯ ವಿಜೃಂಭಣೆಯೊಂದಿಗೆ ಅಧಿಕಾರಶಾಹಿಯೂ ಸೇರಿ ಹೆಣ್ಣಿನ ಬದುಕಿನಲ್ಲಿ ತರುವ ತಲ್ಲಣಗಳು, ಅನಾಹುತಗಳು, ಅವಳ ಭವಿಷ್ಯವನ್ನೇ ಹೊಸಕಿಹಾಕುವ, ನುಂಗಿ ನೊಣೆಯುವ ಪರಮಕ್ರೌರ್ಯ–ಇವು ಅತ್ಯಂತ ವಾಸ್ತವದ ನೆಲೆಯಲ್ಲಿ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಆದ್ದರಿಂದ ಕಾದಂಬರಿಯ ಹೊರಾವರಣಕ್ಕಿಂತ ಒಳಾವರಣವನ್ನು ವಿಮರ್ಶೆಗೆ ಒಳಪಡಿಸುವುದು ಹೆಚ್ಚು ಒಳ್ಳೆಯದು. ಕಾದಂಬರಿಯ ಆರಂಭದಲ್ಲೇ ಹೆಣ್ಣು ಬಯಸುವ ಗಂಡು ಹೇಗಿರಬೇಕೆಂಬ ಒಂದು ವಿಶಿಷ್ಟವಾದ ಕಣ್ಣೋಟವಿದೆ. "ಈಗ ಆದಿಮನ ಎದಿರು ಮಾಧವಿಯ ಎಲ್ಲ ದೌರ್ಬಲ್ಯಗಳೂ ವ್ಯಕ್ತಗೊಳ್ಳುತ್ತವೆ....ಅದನ್ನೇ ಅಚ್ಚುಕಟ್ಟಾಗಿ ಪ್ರತಿಬಿಂಬಿಸುವ ಕನ್ನಡಿ ಆಗಿದ್ದಾನೆ" (ಕಪ್ಪು ಕಿವಿಯ ಬಿಳಿಯ ಕುದುರೆಗಳು; ೫) ಎಂಬಲ್ಲಿ ಗಂಡು–ಹೆಣ್ಣಿನ ಸಾಂಗತ್ಯ ಕಂಡುಕೊಳ್ಳಬೇಕಾದ ಸ್ವರೂಪ ಮತ್ತು ವಿನ್ಯಾಸವೆಂಬಂತೆ ಆದಿಮ–ಮಾಧವಿಯರು ಕಾಣಿಸಿಕೊಳ್ಳುತ್ತಾರೆ. ಮರದ ಮೇಲಿನ ಹಕ್ಕಿಗೂಡಿನಲ್ಲಿರುವ ಹಕ್ಕಿಮರಿಗಳನ್ನು ಕುರಿತು ಮಾಧವಿ ಆಡುವ ಮಾತುಗಳಲ್ಲಿ ಬದುಕನ್ನು ಗ್ರಹಿಸುವಲ್ಲಿ ಹೆಣ್ಣಿಗೆ ಇರುವ ಸೂಕ್ಷ್ಮಪ್ರಜ್ಞೆ ವ್ಯಕ್ತವಾಗಿದೆ (ಅದೇ; ೫–೭). ಒಂದು ಸಂಗತಿಯನ್ನು ಅದರ ಎಲ್ಲಾ ಸೂಕ್ಷ್ಮಗಳೊಂದಿಗೆ ಅರಿಯಲು ಬೇಕಾದ ಧ್ಯಾನಸ್ಥ ಮನಸ್ಥಿತಿ, ತಲ್ಲೀನತೆ ಗಂಡಿಗಿಂತ ಹೆಣ್ಣಿನಲ್ಲಿ ಅಧಿಕವಾಗಿರುವುದನ್ನು ವೇದಾ ಇಲ್ಲಿ ಗುರುತಿಸಿದ್ದಾರೆ. ಅಪ್ಪ–ಅಮ್ಮ ಹಕ್ಕಿಗಳು, ಅವುಗಳ ಮರಿಗಳು ಮತ್ತು ಗೂಡಿನಲ್ಲಿನ ಅವುಗಳ ಬದುಕು–ಯಯಾತಿಯನ್ನು ಭೇಟಿ ಮಾಡುವ ಪೂರ್ವದ ಮಾಧವಿಯ ಬದುಕಿನ ರೂಪಕವಾಗಿ ಒಡಮೂಡಿದೆ.

DOI: 10.59176
http://www.kristujayantijournal.com/index.php/KJKSP

**ಹೆಣ್ಣು: ಶಕ್ತಿ–ಸಂಸ್ಕೃತಿ–ಮಾನವೀಯ ನೆಲೆ:** ಹೆಣ್ಣು ಎದುರಿಸುವ ಬದುಕಿನಲ್ಲಿ ಇರುವ ಬೇರೆ ಬೇರೆ ಸಂಬಂಧಗಳು ಕಾಲಕಾಲಕ್ಕೆ ತಮ್ಮ ಮುಖಗಳನ್ನು ಬದಲಾಯಿಸಿಕೊಳ್ಳುತ್ತ ಹೋಗುತ್ತವೆ. ತನ್ನೆಲ್ಲ ಭಾವೋದ್ವೇಗವನ್ನು ಹೊರಹಾಕುವ ಮತ್ತು ಅದನ್ನು ಮೀರುವ ಶಕ್ತಿಯೂ ಹೆಣ್ಣಿನಲ್ಲಿದೆ ಎಂಬುದು ಇಲ್ಲಿನ ಪಾರ್ವತಿ ಮತ್ತು ಅವಳ ತಾಯಿಯ ಪಾತ್ರಗಳಲ್ಲಿ ವ್ಯಕ್ತವಾದರೆ, ಮಾಧವಿಯ ತಾಯಿ ಲಕ್ಷ್ಮಿಯ ಪಾತ್ರವು ಹೆಣ್ಣಿನ ನೋವಿನ, ಅಸಹಾಯಕತೆಯ ಪರಂಪರೆಯಾಗಿ ಕಾಣಿಸಿಕೊಳ್ಳುತ್ತದೆ. ಕಾದಂಬರಿಯನ್ನು ಓದುತ್ತ ಹೋದಂತೆ ದೇಹಮೂಲದಿಂದ ಹೆಣ್ಣನ್ನು ನೋಡುವ ಸಮಾಜದ ದೃಷ್ಟಿ ಎಂದಿಗೂ ಬದಲಾಗುವುದೇ ಇಲ್ಲವೇನೋ ಎಂಬ ಆತಂಕ ನಮ್ಮಲ್ಲಿ ಮೂಡುತ್ತದೆ. ಹೆಣ್ಣಿನ ಉದ್ಯೋಗ, ಸ್ಥಾನಮಾನಗಳು ಅವಳ ಸ್ಥಿತಿಯನ್ನು ಸುಧಾರಿಸುವುದಕ್ಕೆ ಬದಲಾಗಿ ಸಮಸ್ಯೆಗಳನ್ನು ಹೆಚ್ಚಿಸುತ್ತ ಹೋಗುವಂತೆ, ಅರಮನೆಯಲ್ಲಿ ಉದ್ಯೋಗಿಗಳಾದ ಲಕ್ಷ್ಮಿ, ಅಂಬಿಕೆಯರ ಪಾತ್ರಗಳ ಮೂಲಕ ಕಾಣುತ್ತದೆ. ಅಮಾಯಕರನ್ನು ಬಲಿ ತೆಗೆದುಕೊಳ್ಳುವ ಯುದ್ಧಗಳು ಜೀವವಿರೋಧಿಯಾದವು. ಅದರಲ್ಲಿ ನೇರವಾಗಿ ಪಾಲ್ಗೊಂಡವರ ಮತ್ತು ಪಾಲ್ಗೊಳ್ಳದವರ ಬದುಕನ್ನೂ ಜಯಾಪಜಯದ ಹೆಸರಿನಲ್ಲಿ ಆಪೋಶನ ತೆಗೆದುಕೊಳ್ಳುವ ಯುದ್ಧವನ್ನು ಕಾದಂಬರಿ ನಿರಾಕರಿಸುತ್ತದೆ. **"**....ಯಾರದೋ ಯುದ್ಧಕಾಗಿ, ದಿಗ್ವಿಜಯಕ್ಕಾಗಿ ಮತ್ತಾರೋ ತಲೆದಂಡ ಒಪ್ಪಿಸುವ....ಇರುವ ಅಷ್ಟು ನೆಲವನ್ನು ಉತ್ತು ಬಿತ್ತಿದರೆ ಬದುಕಿಗಾಗುತ್ತದೆ**"** (೧೯)ಎಂಬಲ್ಲಿ **'**ಜೀವವನ್ನು ಬೆಳೆಸಬಲ್ಲ ನೆಲದ ಜೊತೆಗಿನ ಬದುಕು, ಬಂಧ, ನಮ್ಮನ್ನು ಉಳಿಸಬಲ್ಲುದೇ ಹೊರತು, ಜೀವವನ್ನು ಬಲಿತೆಗೆದುಕೊಳ್ಳುವ, ಅರ್ಥಹೀನ ಜಯಕ್ಕಾಗಿ, ನೆಲಕ್ಕಾಗಿ ನಡೆಸುವ ರಕ್ತಪಾತವಲ್ಲ' ಎಂಬ ಸಾರ್ವಕಾಲಿಕವಾದ ಮೌಲ್ಯವೊಂದು ರೂಪುಗೊಂಡಿದೆ. ಜಾಗತೀಕರಣದ ಕಾರಣದಿಂದ ವಿನಾಶದ ಕಡೆಗೆ ಸಾಗುತ್ತಿರುವ ಸಮಾಜ, ಕೃಷಿಪ್ರಧಾನ ಶ್ರಮ ಸಂಸ್ಕೃತಿ ಮತ್ತು ಬಲಿಷ್ಠ ರಾಷ್ಟ್ರಗಳು ಅಭಿವೃದ್ಧಿಶೀಲ ದೇಶಗಳ ಮೇಲೆ ನಿಯಂತ್ರಣ ಸಾಧಿಸುತ್ತಿರುವ ಇಂದಿನ ಸಂದರ್ಭದಲ್ಲಿ ಇವು ಅತ್ಯಂತ ಪ್ರಸ್ತುತವೂ ಹೌದು.

**'ಹೆಣ್ಣಾಗಿಸು'ವ ವಿವಿಧ 'ಮಾನದಂಡ'ಗಳು:** ನಮ್ಮ ಪುರಾಣ, ಚರಿತ್ರೆಗಳೆಲ್ಲವೂ ಪ್ರಭುತ್ವದ ಅಧಿಕಾರಶಾಹಿಯ ಕ್ರೌರ್ಯದ ಪರಮಾವಧಿಗೆ ಸಾಕ್ಷಿಗಳಾಗುತ್ತಲೇ ಬಂದಿವೆ. ಮಧ್ಯವಯಸ್ಸಿನ ಅರಸ ಯಯಾತಿಯ ಕಾಮಕ್ಕೆ ಅನಿರೀಕ್ಷಿತವಾಗಿ ತುತ್ತಾಗಬೇಕಾಗಿ ಬಂದ ಅಂತಃಪುರದ ಬಾಗಿಲು ಕಾಯುವ ಯುವತಿ ಲಕ್ಷ್ಮಿ ಅನುಭವಿಸುವ ದೈಹಿಕ, ಮಾನಸಿಕ ಯಾತನೆಯನ್ನು ಯಾರೂ ಅರ್ಥಮಾಡಿಕೊಳ್ಳದ ವಿಪರ್ಯಾಸವನ್ನು ಕಾದಂಬರಿ ಮುಂದಿಡುತ್ತದೆ. ಸಾಮಾನ್ಯ ಸಂದರ್ಭಗಳಲ್ಲಿ ಅತ್ಯಾಚಾರವೆನಿಸಿಕೊಳ್ಳುವ ಕೃತ್ಯವೊಂದು ಯಾರಿಂದ ಘಟಿಸಿದೆ ಎಂಬುದರ ಆಧಾರದಲ್ಲಿ ಅರಸನ ಕತ್ತಿಯೊಂದಿಗೆ ಕಾಲ್ಪನಿಕ ವಿವಾಹದ ಚೌಕಟ್ಟಿಗೊಳಪಡುವುದು, ನ್ಯಾಯಬದ್ಧವೆಂದು ಪರಿಗಣಿತವಾಗಿ ಮನ್ನಣೆ ಪಡೆಯುವುದು ನಮ್ಮ ಸಮಾಜ ವ್ಯವಸ್ಥೆ ಹೇಗೆ ಯಜಮಾನ ಸಂಸ್ಕೃತಿಯನ್ನು ಪೋಷಿಸುವ ನಿಟ್ಟಿನಲ್ಲೇ ರೂಪುಗೊಳ್ಳುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಪುರುಷರ ನ್ಯಾಯ, ನೀತಿ, ಧರ್ಮಗಳ ಅರ್ಥವೇ ಬೇರೆ ಅದರೊಳಗೆ ಹೆಣ್ಣು ಗೈರಾಗಿದ್ದಾಳೆ. ಶೀಲ, ಪಾವಿತ್ರ್ಯಗಳ ಹೆಸರಿನಲ್ಲಿ ಯಾವುದನ್ನಿಟ್ಟುಕೊಂಡು ಮನುಷ್ಯ (ಪುರುಷ) ಹೆಣ್ಣಿನ ಮೇಲೆ ನಿರಂತರ ಶೋಷಣೆ ಮಾಡಿದ್ದಾನೋ ಅದನ್ನು

ಮರೆಸಲು, ತನ್ನ ಸ್ವಾರ್ಥಪರವಾದ ಹಲವು ಮುಖಗಳನ್ನು ಮರೆಸಲು ಧರ್ಮ, ನ್ಯಾಯ, ನೀತಿಗಳ ಮುಸುಕು ಹಾಕಿಕೊಳ್ಳುತ್ತಾನೆ ಎಂಬುದನ್ನು ನಿಷ್ಠುರವಾಗಿ ಈ ಕಾದಂಬರಿ ಪ್ರತಿಪಾದಿಸುತ್ತದೆ.

ವಿವಾಹಸಂಸ್ಥೆಯ ಮೂಲಕ ಗುರುತಿಸಲಾಗದ, ಅಲ್ಲಿ ಮಾನ್ಯತೆಯನ್ನು ಪಡೆಯದ ಲಕ್ಷ್ಮಿ–ಯಯಾತಿ, ಶರ್ಮಿಷ್ಠೆ–ಯಯಾತಿಯರ ಸಂಬಂಧಗಳು ಈ ಕಾದಂಬರಿಯೊಳಗೆ ಉತ್ಪನನಗೊಳ್ಳುತ್ತವೆ; ಶೋಧಕ್ಕೆ ಒಳಗಾಗುತ್ತವೆ. ಅಲ್ಲದೆ ದೇವಯಾನಿ ಮತ್ತು ಶರ್ಮಿಷ್ಠೆ ಪಾತ್ರಗಳ ಮೂಲಕ 'ಹೆಣ್ತನ' ಮತ್ತು 'ತಾಯ್ತನ'ಗಳಿಗೆ ಹೊಸ ಅರ್ಥ ಲಭಿಸಿದೆ. ಸವತಿಮಾತ್ಸರ್ಯದಿಂದ 'ಶರ್ಮಿಷ್ಠೆಯನ್ನು ತನ್ನ ಪರಮವೈರಿಯಾಗಿಯೇ ಕಂಡ ದೇವಯಾನಿ' ಮತ್ತು 'ಶರ್ಮಿಷ್ಠೆಯ ಮಗ ಪುರುವಿನ ದುರವಸ್ಥೆಗಾಗಿ ಮರುಗುವ ದೇವಯಾನಿ' –ಅಚ್ಚರಿಯ ಎರಡು ಮುಖಗಳಾಗಿವೆ. ಇಲ್ಲಿ ದೇವಯಾನಿ ಓರ್ವ ತಾಯಿ ಮತ್ತು ಪುರು ಒಬ್ಬ ಮಗನೇ ಹೊರತು, ಅವನು ಅವಳಿಗೆ ಸವತಿಯ ಮಗನಲ್ಲ. ಬದುಕಿನಲ್ಲಿ ಸರಿಯುತ್ತ ಹೋಗುವ ಕಾಲ ಮತ್ತು ಎದುರಾಗುವ ಸೋಲುಗಳು ಎಂಥವರನ್ನೂ ಶಕ್ತಿಹೀನಗೊಳಿಸುತ್ತವೆ ಎಂಬುದು ವಾಸ್ತವ. ಯಯಾತಿಯ 'ಪತ್ನಿತ್ವ'ದ ಸಾಧನೆಗಾಗಿ ದೀರ್ಘಕಾಲ ಪರಮದ್ವೇಷಿಗಳಾಗಿದ್ದ ಅವರು ತಾವಿಬ್ಬರೂ ಸಮಾನ ದುಃಖಿಗಳು ಎಂಬುದನ್ನು ಮನಗಂಡು ಒಂದಾಗುವುದು 'ಸಹೋದರಿತ್ವ'ದ ಪರಿಕಲ್ಪನೆಯನ್ನು ಮುನ್ನೆಲೆಗೆ ತರುತ್ತದೆ. ಅಕಾಲದಲ್ಲಿ ತಂದೆಗಾಗಿ ವೃದ್ಧನಾಗಬೇಕಾಗಿ ಬಂದ ತನ್ನ ಸವತಿಯ ಮಗ ಪುರುವಿನ ಅವಸ್ಥೆಗೆ ದೇವಯಾನಿಯ ಒಳಗಿನ 'ತಾಯಿ' ಮರುಗುವುದು; ಅವಳೊಂದಿಗೆ ಶರ್ಮಿಷ್ಠೆ ಕೂಡ ತಾವು ಎಲ್ಲೋ ಅಸ್ಪಷ್ಟವಾಗಿ ಕೇಳಿದ ಲಕ್ಷ್ಮಿಯ, ಇದೀಗ ತಾನೆ ಕಂಡ ಮಗಳು ಮಾಧವಿಯ ಸ್ಥಿತಿಗಾಗಿ ತೊಳಲಾಡುವುದು–ಈ ಎಲ್ಲ ಸನ್ನಿವೇಶಗಳಲ್ಲಿ ಅವರು ನಿಜವಾದ ಮನುಷ್ಯರಾಗುವುದನ್ನು ವೇದಾ ಅವರು ಕಂಡರಿಸಿದ್ದಾರೆ. ಇನ್ನೊಬ್ಬರ ನೋವನ್ನು ಅರ್ಥಮಾಡಿಕೊಂಡಾಗ, ಆ ನೋವು ಮಾತ್ರವೇ ಜಗತ್ತಿನ ಎಲ್ಲರನ್ನೂ ಮತ–ಧರ್ಮ, ಜಾತಿ, ಲಿಂಗಾತೀತವಾಗಿ ಒಂದಾಗಿಸುವುದು ವಾಸ್ತವ.

**ಹೆಣ್ಣು: ವ್ಯವಸ್ಥೆ ಮತ್ತು ವಾಸ್ತವ:** ಕಾದಂಬರಿಯು ಆದಿಮ, ಯಯಾತಿ, ಶರಭಯ್ಯ, ಗಾಲವ, ಹರ್ಯಶ್ವ, ದಿವೋದಾಸ, ಉಶೀನರ, ವಿಶ್ವಾಮಿತ್ರ, ಅಚ್ಯುತ ಮೊದಲಾದ, ಗಂಡಿನ ಬೇರೆ ಬೇರೆ ಮಾದರಿಗಳನ್ನು ನೀಡಿದೆ. ಇವರಲ್ಲಿ ಆದಿಮ ಮತ್ತು ಅಚ್ಯುತರನ್ನು ಹೊರತುಪಡಿಸಿದರೆ ಉಳಿದವರು ಮಾಧವಿಯನ್ನು ಓರ್ವ ದೇಹಸುಖಕ್ಕಾಗಿ ಇರುವ ವಸ್ತುವಾಗಿ, ಗಂಡು ಸಂತಾನವನ್ನು ಕೊಡಬಹುದಾದ ಯಂತ್ರವಾಗಿ ಮಾತ್ರವೇ ಕಂಡಿದ್ದಾರೆ. ಹೆಂಡತಿಯಾದವಳನ್ನು ಮಾತ್ರವಲ್ಲ, ತಾನು ಬಯಸಿದ ಹೆಣ್ಣುಗಳೆಲ್ಲರನ್ನೂ 'ಶಯನೇಷು ವೇಶ್ಯೆ'ಯರನ್ನಾಗಿ, 'ದಾಸಿ'ಯರನ್ನಾಗಿಯೇ ನೋಡಿದ ಯಯಾತಿ ಅಂಥವರನ್ನು ಪ್ರತಿನಿಧಿಸುವಂತಿದ್ದರೆ, ಗಂಡು–ಹೆಣ್ಣಿನ ಸಂಬಂಧಕ್ಕೆ ಹೊಸ ಭಾಷ್ಯವನ್ನು ಬರೆದ ಆದಿಮ ಮತ್ತು ಅಚ್ಯುತರು ಇನ್ನೊಂದೆಡೆ ಇದ್ದಾರೆ. ಆದಿಮ "ಮಾಧವಿಯ ಬಗೆಗೆ ಎಷ್ಟೆಲ್ಲಾ ಜತನದಿಂದ, ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾನೆ....ಒಬ್ಬ ಒಳ್ಳೆಯ ಗೆಳೆಯ ಒಬ್ಬ ಗೆಳತಿಗೆ ಮಾಡುವ ಜತನ" (೬೧) ಹೀಗೆ ಅವರಿಬ್ಬರ ಸಂಬಂಧಕ್ಕೆ ಹಲವು ಸುಂದರ ಮುಖಗಳಿವೆ. ಇಲ್ಲಿನ ತಂದೆ, ಗಂಡ, ಅಣ್ಣ, ಗೆಳೆಯ–ಈ ಎಲ್ಲ ಸಂಬಂಧಗಳ ಹಿಂದೆ ಇರುವ ಗಂಡು 'ಒಳ್ಳೆಯ'ವನಾದರೆ ಮಾತ್ರ ಇದು ಸುಂದರವಾಗುವುದು

DOI: 10.59176
http://www.kristujayantijournal.com/index.php/KJKSP

ಸಾಧ್ಯವಾಗುವುದು. ಹಾಗೆಯೇ ಬೇರೆ ಹೆಂಗಸರಿಲ್ಲದ ವಿಶ್ವಾಮಿತ್ರನ ಆಶ್ರಮದಲ್ಲಿ ಗರ್ಭಿಣಿಯಾದ ಮಾಧವಿಯನ್ನು ಅಚ್ಯುತ ನೋಡಿಕೊಳ್ಳುವ ರೀತಿ, ಅವಳ ಹೆರಿಗೆಯ ಸಮಯದಲ್ಲಿ ಅವನ ನೇತೃತ್ವದಲ್ಲಿ ಇಡೀ ಶಿಷ್ಯವೃಂದವೇ ಪಾಲ್ಗೊಂಡ ಕ್ರಮ ಅದ್ಭುತವಾದುದು.

ಸಂಸಾರ, ಮನೆ, ಕುಟುಂಬ, ಸಂಬಂಧ, ಸಂರಕ್ಷಣೆಯ ಹೆಸರಿನಲ್ಲಿ ಹೆಣ್ಣನ್ನು ಬಂಧಿಸಿಡುವುದು ಪರಂಪರೆಯಿಂದಲೂ ನಡೆದು ಬಂದಿದೆ. ಹೆಣ್ಣಿಗೂ ಸ್ವಾತಂತ್ರ್ಯದ ಅಪೇಕ್ಷೆ ಇದೆ. ಇಲ್ಲಿನ ಮಾಧವಿ ಅಪೇಕ್ಷಿಸುವುದು ನೆಲದೊಂದಿಗೂ ಪ್ರೀತಿಯ ಸಂಬಂಧವನ್ನು ಉಳಿಸಿಕೊಳ್ಳುವ, ನಿರ್ಭೀತ ಸ್ವಾತಂತ್ರ್ಯದ, ಹಕ್ಕಿಯಂತಿರುವ ಬದುಕನ್ನು. ಯಾಕೆಂದರೆ ಹೆಣ್ಣುಗಳ ಬದುಕು ನಿಂತಿರುವುದೇ ಸಂಗಾತಿಯಲ್ಲಿ. ಆದರೆ ಸೂಕ್ತ ಸಂಗಾತಿಯ ಆಯ್ಕೆ ನಿಸರ್ಗದ ಇತರ ಜೀವಿಗಳಲ್ಲಿ ಅತ್ಯಂತ ಸಹಜವಾಗಿದ್ದರೆ, ಮನುಷ್ಯ ಜಗತ್ತಿನಲ್ಲಿ ಯಾರದೋ ಆಗಿರುವುದು ಎಲ್ಲ ದುರಂತಗಳಿಗೂ ಕಾರಣ. ಏರುಜವ್ವನದ ಅವಧಿ ಮನುಷ್ಯರ ಬದುಕಿನಲ್ಲಿ ಏನೆಲ್ಲ ಆಟವಾಡಿಸುತ್ತದೆ. ಆದರೆ ಅದರ ಕುರಿತ ಚಿಂತನೆಯನ್ನು ಎಲ್ಲರೂ ಮಾಡಬೇಕಾದ ಕಾಲ ಮುಂದೆ ಬಂದೇ ಬರುತ್ತದೆ. ದೇವಯಾನಿ, ಶರ್ಮಿಷ್ಠೆ, ಪುರು ಇವರೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುತ್ತಿರಬೇಕಾದರೆ, ಅಧಿಕಾರ, ಸಂಪತ್ತು ಮತ್ತು ಮಗನಿಂದ ಎರವಲು ಪಡೆದ ಯೌವನದ ಮದದಿಂದ ಯಯಾತಿ ಮಾತ್ರವೇ ಇದಕ್ಕೆ ಹೊರತಾಗುತ್ತಾನೆ. ತನ್ನ ಸ್ವಾರ್ಥಕ್ಕಾಗಿ ಗುರುತಿಸದೆ ಬಿಟ್ಟ ಮಾಧವಿ ಮತ್ತು ತನ್ನ ಸಂಬಂಧವನ್ನು ಇದ್ದಕ್ಕಿದ್ದಂತೆಯೇ ಗುರುತಿಸುವ, ಮಗನ ಹರಯವನ್ನೂ ಬಯಸುವ ಯಯಾತಿ ಪುರುಷ ಕ್ರೌರ್ಯಕ್ಕೆ ಪರಮ ಉದಾಹರಣೆಯಾಗಿ ಕಂಡುಬರುತ್ತಾನೆ.

ಅನಾದಿ ಕಾಲದಿಂದಲೂ ಕಾಮವು ಮನುಷ್ಯರನ್ನು ನಾನಾ ಬಗೆಯಿಂದ ಕಾಡಿದೆ. ಕಾಮವಿಲ್ಲದೆ ಜಗತ್ತಿಲ್ಲ. ಆದರೆ ಕಾಮ ಬದುಕಿನ ಭಾಗವೇ ಹೊರತು ಕಾಮವೇ ಬದುಕಲ್ಲ. ಕಾಮವು ಮಾನವಪರವಾದ ಧರ್ಮದ ಚೌಕಟ್ಟಿನಲ್ಲಿದ್ದಾಗ ಮಾತ್ರ ಸಹ್ಯವೆನಿಸಿಕೊಳ್ಳುತ್ತದೆ. ಹಾಗೆಯೇ ಒತ್ತಾಯದ ಪ್ರೇಮವು ಒಮ್ಮುಖವಾಗುತ್ತದೆಯೇ ಹೊರತು ಬೇರೇನಲ್ಲ ಎಂಬುದಕ್ಕೆ ಯಯಾತಿ ಮತ್ತು ದೇವಯಾನಿಯರ ಸಂಬಂಧ, ಶರ್ಮಿಷ್ಠೆ–ಯಯಾತಿಯರ ಸಂಬಂಧ, ಸಾಂಪ್ರದಾಯಿಕ ವಿವಾಹ ವ್ಯವಸ್ಥೆಯೊಳಗಿನ ಹರ್ಯಶ್ವ ಮಹಾರಾಜ ಮತ್ತು ಅವನ ರಾಣಿಯ ಸಂಬಂಧಗಳು ಉದಾಹರಣೆ. ಪರಂಪರೆ ಹೆಣ್ಣಿಗೆ ನೀಡಿದ 'ಅರ್ಧಾಂಗಿನಿ' ಎಂಬ ಪೊಳ್ಳು ಪಟ್ಟವನ್ನು ಮತ್ತು ಅದರ ಮುಖವಾಡಗಳನ್ನು ಬಯಲಿಗೆಳೆಯುವ ಸನ್ನಿವೇಶವು ಈ ಕಾದಂಬರಿಯುಲ್ಲಿ ಅದ್ಭುತವಾಗಿ ಚಿತ್ರಣಗೊಂಡಿದೆ. ಮಾಧವಿಯಂತಹ ನಿಷ್ಪಾಪಿ ಹೆಣ್ಣಿಗೆ ಧೈರ್ಯ ತುಂಬಬೇಕಿದ್ದ ಮಹಾರಾಣಿ ದೇವಿದೇವಯಾನಿ ಮತ್ತು ಶರ್ಮಿಷ್ಠೆಯರು ಯಯಾತಿಯ ಆಗಮನದ ವಾರ್ತೆಯನ್ನು ಕೇಳಿದ ತಕ್ಷಣ ನಡುಗುವುದು–ದೀರ್ಘಕಾಲದ ದಾಂಪತ್ಯದ ಬಳಿಕವೂ ಗಂಡನೆಂದರೆ ಹೆಂಡತಿ ನಡುಗುವ ಭಯವನ್ನು ಹೊಂದಿರುವುದು ವಿಪರ್ಯಾಸವಲ್ಲದೆ ಮತ್ತೇನು? ಅರ್ಧಾಂಗಿನಿ, ಸಹಧರ್ಮಿಣಿ ಮೊದಲಾದ ಸಾಂಪ್ರದಾಯಿಕ ಸ್ತ್ರೀ ಪಡಿಯಚ್ಚುಗಳೆಲ್ಲವೂ ಎಷ್ಟೊಂದು ಅರ್ಥಹೀನ ಎಂಬುದನ್ನು ಅಲ್ಲಲ್ಲಿ ಸಾಬೀತು ಮಾಡುವ ಈ ಕಾದಂಬರಿಯಲ್ಲಿ ಯಯಾತಿ ಮತ್ತು ದೇವಯಾನಿ, ಯಯಾತಿ ಮತ್ತು ಶರ್ಮಿಷ್ಠೆ, ಹರ್ಯಶ್ವ ಮತ್ತು ಅವನ ಮಹಾರಾಣಿ, ದಿವೋದಾಸ ಮತ್ತು ಐಶ್ವರ್ಯಾದೇವಿ,

ಉಶೀನರ ಮತ್ತವನ ಮಡದಿಯರು ವಿಭಿನ್ನ ದಾಂಪತ್ಯದ ಮಾದರಿಗಳಾಗಿದ್ದಾರೆ. ಆದರೆ ಇವ್ಯಾವುದೂ ಕೆಲವು ಭಿನ್ನ ಕಾರಣಗಳಿಗಾಗಿ ಸಫಲ ದಾಂಪತ್ಯಗಳಲ್ಲ ಎಂಬುದು ಗಮನಾರ್ಹ.

ಸಂತಾನದ ಐಡೆಂಟಿಟಿಯನ್ನು ಪಿತೃತ್ವದ ಮೂಲಕವೇ ನೋಡುವ ದೃಷ್ಟಿಕೋನ ಎಲ್ಲರದು. ಆದರೆ ಹೆಣ್ಣುಸಂತಾನದ ಐಡೆಂಟಿಟಿಯನ್ನು ಮಾತ್ರ ಗಂಡು ತನಗೆ ಬೇಕೆಂದಾಗ ಬೇಕಾದ ರೀತಿಯಲ್ಲಿ ವ್ಯಾಖ್ಯಾನಿಸಿಕೊಳ್ಳುವುದು ಮಾಧವಿಯ ಸಂದರ್ಭದಲ್ಲಿ ಕಂಡುಬರುತ್ತದೆ. ಮಹಾರಾಜ ತನ್ನ ಮಗಳೆಂಬ ಪಿತೃತ್ವದ ಅಧಿಕಾರದಿಂದ ಅವಳನ್ನು ಒತ್ತೆಯಾಗಿಸಿದರೆ, ಮಹಾರಾಜನ ಮಗಳಾಗಿ ಇನ್ನೊಬ್ಬರಿಗೆ ದಾನವಾದಳೇ ಎಂಬ ಅಚ್ಚರಿಗೆ ಆಕೆ 'ದಾಸೀಪುತ್ರಿ' (೧೫೫) ಯೆಂಬ ಸಮಾಧಾನವನ್ನು ಕಂಡುಕೊಳ್ಳಲಾಗುತ್ತದೆ. ಸಂತಾನ ಪ್ರಾಪ್ತಿಗೆ ಕೇವಲ ಹೆಣ್ಣೇ ಕಾರಣಳೆಂಬಂತೆ ದೂಷಿಸುವುದು, ಅದಕ್ಕಾಗಿ ಗಂಡಸು ಎಷ್ಟು ಹೆಣ್ಣುಗಳ ಸಹವಾಸವನ್ನೂ ಬೇಕಾದರೂ ಮಾಡಬಹುದೆಂಬುದು "....ಗಂಡಸರು ಅಂಗಿಯ ಮೇಲೆ ಅಂಗಿ ತೊಡುವುದು ಅದೂ ರಾಜತ್ವದ ಪರಮಾಧಿಕಾರ ಹೊಂದಿದವರು ಅತ್ಯಂತ ಸಹಜವೇ ಆಗಿತ್ತು"(೧೬೫) ಎಂಬಲ್ಲಿ ಮರುವಿಮರ್ಶೆಗೆ ಒಳಗಾಗಿದೆ. ಹೆಣ್ಣಿನ ಫಲವಂತಿಕೆಯ ಕುರಿತ ಸಾಂಪ್ರದಾಯಿಕ ವ್ಯಾಖ್ಯಾನಗಳು ಕೇವಲ ಹೆರುವ ಫಲವಂತಿಕೆಗೆ ಸೀಮಿತವಾಗಿ ನೋಡುವುದು; ಹೆಣ್ಣಿನ ಇತರ ಪ್ರತಿಭೆಗಳನ್ನು ಫಲವಂತಿಕೆಯ ನೆಲೆಯಲ್ಲಿ ಗ್ರಹಿಸದಿರುವುದು ಕೂಡ ಇಲ್ಲಿ ಮಾಧವಿ ಮತ್ತು ದಿವೋದಾಸ ಮಹಾರಾಜನ ರಾಣಿಯ ಸಂವಾದದಲ್ಲಿ (೨೨೭–೨೨೮) ಮರುವಿಮರ್ಶೆಗೆ ಒಳಪಟ್ಟಿವೆ(ನೇಮಿಚಂದ್ರ ಅವರ 'ಹೊಸಹುಟ್ಟು' ಕತೆ ಈ ಸಂದರ್ಭದಲ್ಲಿ ನೆನಪಾಗುತ್ತದೆ). ಮಾಧವಿ ಎಲ್ಲರಿಗೂ ಗಂಡುಮಗುವನ್ನು ಹೆತ್ತುಕೊಟ್ಟು ಹೊರಟು ಹೋಗಬೇಕಾಗಿ ಬರುವ ಪ್ರಸಂಗಗಳು ಆಧುನಿಕ ಕಾಲಘಟ್ಟದ 'ಬಾಡಿಗೆ ತಾಯ್ತನ'ದ ಪರಿಕಲ್ಪನೆಯನ್ನು ನೆನಪಿಸುತ್ತವೆ.

ಅಧಿಕಾರವಿರುವ ಪುರುಷನಿಗೆ ದಾಸಿಯೂ ಒಂದೇ ರಾಣಿಯೂ ಒಂದೇ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ಪುರುಷನ ಲಂಪಟತನದೆದುರು ರಾಣಿ, ದಾಸಿಯರ ಸ್ಥಿತಿ ಒಂದೇ. "ಯಾವ ಹೆಣ್ಣಿಗೆ ತಾನೇ ತನಗನ್ನಿಸಿದ್ದನ್ನು ಮಾಡಲು ಅವಕಾಶ ಇದೆ ನೀವೇ ಹೇಳಿ. ಅವಳು ನನ್ನಂಥ ದಾಸಿಯಿರಬಹುದು ಅಥವಾ ನಿಮ್ಮಂಥ ಮಹಾರಾಣಿಯೇ ಇರಬಹುದು" (೨೯೪) ಎಂದು ದೇವಯಾನಿಗೆ ಮಾಧವಿ ಹೇಳುವ ಮಾತುಗಳು ನಿಷ್ಠುರ ಸತ್ಯವಾಗಿದೆ. ಗಂಡು ಲೋಕಗಳನ್ನು ಗೆಲ್ಲಬಲ್ಲ ಸಂತಾನವಾದರೆ ಮಾಧವಿಯಂಥ ಹೆಣ್ಣು, ಈ ಗಂಡಿನ ಗೆಲುವಿಗೆ ಸಾಮಗ್ರಿಯಾಗುವ ಸಂತಾನವೆಂದು ಪರಿಗಣಿತಳಾಗಿದ್ದಾಳೆ. ಸ್ತ್ರೀ–ಪುರುಷ ಸಮಾನತೆಯ ಕುರಿತು ಎಷ್ಟೇ ದೊಡ್ಡದಾಗಿ ಭಾಷಣಗಳನ್ನು ಮಾಡಿದರೂ ಅದು ಸಮಾಜದಲ್ಲಿ ಅನುಷ್ಠಾನಗೊಳ್ಳಲು ಮಾನಸಿಕ ಬದಲಾವಣೆ ಅತ್ಯಗತ್ಯ. ರಾಜ್ಯ ದಾಹ, ಅಧಿಕಾರದ ದಾಹ, ಪುರುಷತ್ವದ ದಾಹಗಳಿಗೆ ಎರವಾದ ಹೆಣ್ಣಿನ ಮೈಮನಸ್ಸುಗಳನ್ನು ಕಾದಂಬರಿ ವಸ್ತುನಿಷ್ಠವಾಗಿ ಚಿತ್ರಿಸಿದೆ. ಯಯಾತಿಯನ್ನು ಹಿಂದಿಟ್ಟುಕೊಂಡು ಮುಂದೆ ನಡೆಯುವ ಮಾಧವಿ, ಗಾಲವನನ್ನು ಹೆಜ್ಜೆಹೆಜ್ಜೆಗೂ ತಿರಸ್ಕಾರದಿಂದ ಕಾಣುವ ಮಾಧವಿ, ತನ್ನ ದೇಹಸುಖಕ್ಕಾಗಿ, ತನ್ನಿಂದ ಪುತ್ರಸಂತಾನಕ್ಕಾಗಿ ಹಪಹಪಿಸುತ್ತಲೇ 'ದಾಸೀಪುತ್ರಿ'ಯೆಂದು ಹಳಿದ ಹರ್ಯಶ್ವನನ್ನು ಹೀಗಳೆಯುವ ಮಾಧವಿ (೧೮೫), ತನ್ನ

ವಾದಗಳಿಂದ ವಿಶ್ವಾಮಿತ್ರನನ್ನು ಬೆಚ್ಚಿಬೀಳಿಸುವ ಮಾಧವಿ–ಹೀಗೆ ಮಾಧವಿಯ ಆಕ್ರೋಶ, ಪ್ರತಿರೋಧಗಳು ಹೊರಹೊಮ್ಮುವ ಸಂದರ್ಭಗಳನ್ನು ಕಾದಂಬರಿ ತುಂಬ ಚೆನ್ನಾಗಿ ಅಭಿವ್ಯಕ್ತಿಸಿದೆ. ಹಾಗೆಯೇ ಆರಂಭದಲ್ಲಿ ಮಾಧವಿಯನ್ನು ಗಾಲವರೊಂದಿಗೆ ಒತ್ತೆಯಾಗಿಸಿ ಕಳುಹಿಸಿಕೊಡುವ ಹೊತ್ತಿಗೆ ಯಯಾತಿಗೆ ತನ್ನ ನೈತಿಕ ಪತನವು ಗೆಲುವಿನಂತೆ ಕಾಣಿಸುವುದು; ನಾಲ್ಕು ವರ್ಷಗಳ ಬಳಿಕ ಆಕೆ ಮರಳಿದಾಗ ಅವನಿಗೆ ಆಗಬೇಕಾದ ಕೀರ್ತಿಯ ಕಾವಿನ ಬದಲು ಕರಾಳ ಸೋಲಿನ ಅನುಭವವಾಗುವುದು ವಿಪರ್ಯಾಸ. ವಿಶ್ವಾಮಿತ್ರ ತನ್ನ ಶಿಷ್ಯ ಗಾಲವನಿಂದ ನೆಪಮಾತ್ರಕ್ಕೆ ಗುರುದಕ್ಷಿಣೆಯಾಗಿ ಅಪೇಕ್ಷಿಸಿ ಮರೆತೂ ಬಿಟ್ಟ, ಮಾಧವಿಯ ಬದುಕನ್ನೇ ಬಲಿ ತೆಗೆದುಕೊಂಡ ಕಪ್ಪು ಕಿವಿಯ ಬಿಳಿಯ ಕುದುರೆಗಳ ಅಗತ್ಯವೇ ಇಲ್ಲದಿರುವುದು, ಗಂಡಸರು ಹೇಗೆ ಬೇಕಾದರೂ ಹೆಣ್ಣಿನ ಬದುಕಿನಲ್ಲಿ ಆಡುವುದಕ್ಕೆ ಹುಡುಕುವ ಅರ್ಥಹೀನ ನೆಪವಾಗಿ ಕಾಣಿಸುತ್ತದೆ. ತನ್ನ ಗುರಿ ಸಾಧಿಸಿದ ಬಳಿಕ ಗಾಲವಮುನಿ ಮಾಧವಿಯ ಬಳಿ, ". . . .ನನ್ನ ಮೇಲೆ ಇನ್ನೂ ಸಿಟ್ಟು, ಸಿಟ್ಟು, ಕೋಪ ಆಕ್ರೋಶಗಳಿವೆಯೇ?" ಎಂದು ಕೇಳುತ್ತಾನೆ. ಅದಕ್ಕೆ ಮಾಧವಿ ತಣ್ಣಗೆ, "ನನಗೆ ನಿಮ್ಮ ಮೇಲಿರುವ ಭಾವನೆಗಳಿಗೆ ಕೇವಲ ಸಿಟ್ಟು, ಕೋಪ, ಆಕ್ರೋಶ ಎಂಬ ಸಾಮಾನ್ಯ ಪದಗಳು....ಇಷ್ಟೇ ನಾನು ನಿಮಗೆ ಹೇಳಬೇಕಾಗಿರುವುದು. ಅದರಾಚೆ ಏನೂ ಇಲ್ಲ" (೨೮೩) ಎನ್ನುವುದು ಶತಶತಮಾನಗಳಿಂದ ಹೆಣ್ಣನ್ನು ತಮ್ಮ ಪ್ರತಿಷ್ಠೆ, ಖ್ಯಾತಿ, ಕೀರ್ತಿ, ಸಂಮಾನಗಳಿಗೆ ಹೆಣ್ಣನ್ನು ಬೇಕಾದ ಹಾಗೆ ಬಳಸಿಕೊಂಡ ಎಲ್ಲ ಪುರುಷರಿಗೂ ನೀಡಿದ ಚಾಟಿಯೇಟಿನಂಥ ಉತ್ತರವಾಗಿದೆ. ವಿಶ್ವಾಮಿತ್ರನು ಗಾಲವನಿಂದ ಬಯಸುವ ಪ್ರಯೋಜನಕ್ಕೆ ಬಾರದ ಗುರುದಕ್ಷಿಣೆಯ ಸಂದರ್ಭದಲ್ಲಿ ಗುರುವೇ ದೇವರು, ಆತ ಹೇಳಿದ್ದೆಲ್ಲವೂ ಪರಮ ಸತ್ಯ, ಆತನ ಮಾತು ಶಿಷ್ಯರಿಗೆ ವೇದವಾಕ್ಯ ಎಂಬ ಮಿಥ್ಯೆಯನ್ನು ಕೂಡ ಕಾದಂಬರಿ ಭಂಜಿಸುತ್ತದೆ. ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯಬೇಕಾದ ಗುರು, ಆತ ನೀಡುವ ವಿದ್ಯೆಯ ಉದ್ದೇಶ ಮತ್ತು ಅದು ತಲುಪಬೇಕಾದ ಗಮ್ಯದ ಕುರಿತು ಚಿಂತಿಸುವಂತೆ ಇದು ಮಾಡುತ್ತದೆ.

ಮನಸ್ಸನ್ನು ದೇಹದಿಂದ ಪ್ರತ್ಯೇಕಿಸಲು ಸಾಧ್ಯವೇ? ಹೀಗಾಗಿ ಮನಸ್ಸನ್ನು ಹೊರತುಪಡಿಸಿದ ದೇಹಮೂಲದ ಪ್ರಜ್ಞೆ ಎಂಬುದು ಅಪ್ಪಟ ಸುಳ್ಳು. ಜಗತ್ತಿನಾದ್ಯಂತ ಪುರುಷರು ಜಗತ್ತಿನ ಸಂತೋಷವೆಲ್ಲ ಗಂಡು–ಹೆಣ್ಣಿನ ದೈಹಿಕ ಸಂಬಂಧದಲ್ಲೇ ಅಡಗಿದೆ; ಅತ್ಯಂತ ಸುಲಭ ಮತ್ತು ಸುಖದಾಯಕ ಎಂದು ಸಾಧಿಸುತ್ತಿರುವ ಈ ಸಂಬಂಧವು ಹೆಣ್ಣಿಗೆ ಮನಮೂಲ ಪ್ರಜ್ಞೆಯಲ್ಲಿ ಅತ್ಯಂತ ಅಸಹನೀಯವೂ ಆಗಬಲ್ಲದು (೧೭೧). ದೇಹಮೂಲ ಪ್ರಜ್ಞೆಯಿಂದ ತನ್ನನ್ನು ತಾನು ಹೊರತಾಗಿಸಿಕೊಳ್ಳುತ್ತ ತನಗೆದುರಾದ ಕೆಡುಕನ್ನು ಸ್ವೀಕರಿಸುವುದಕ್ಕೆ ಹೊರಟ ಮಾಧವಿಗೆ ಅದೇ ಬಗೆಯಲ್ಲಿ ತನಗೆದುರಾದ ಒಳಿತನ್ನು ಸ್ವೀಕರಿಸಲಾಗುವುದಿಲ್ಲ. ಹರ್ಯಶ್ವ, ದಿವೋದಾಸ, ಉಶೀನರ ಮತ್ತು ವಿಶ್ವಾಮಿತ್ರರೊಂದಿಗಿನ ತನ್ನ ದೇಹಮಾತ್ರದ ಸಂಬಂಧದ ಬಳಿಕವೂ ಮಾಧವಿ ತನ್ನ ದೇಹಮೂಲ ಪ್ರಜ್ಞೆಯಿಂದ ಹೊರಬರುವುದರಲ್ಲಿ ಯಶಸ್ವಿಯಾದಂತೆ ಕಾಣಿಸುತ್ತಾಳೆಯೇ ಹೊರತು ಹೊರಬರಲಾಗುವುದಿಲ್ಲ. ಅವಳು ತನ್ನ ಅಪೇಕ್ಷೆ, ಅನುಮತಿಯ ಹೊರತಾಗಿಯೂ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲಿ ಯಾವುದೇ ರೀತಿಯ ವಾತ್ಸಲ್ಯವನ್ನು ಹೊಂದದಿರುವುದು ಮತ್ತು ಕೊನೆಯಲ್ಲಿ ಆದಿಮನ ಕರೆಗೆ ಓಗೊಡದೆ ಇರುವುದರಲ್ಲಿ ಈ ದ್ವಂದ್ವ ಅತ್ಯಂತ ಸಹಜವಾಗಿ ವ್ಯಕ್ತವಾಗಿದೆ. ಮತ್ತು ಈ ದೇಹಮೂಲ ಹಾಗೂ ಮನಮೂಲ ಪ್ರಜ್ಞೆಗಳು ಇಂದಿಗೂ

ಅನಿವಾರ್ಯವಾಗಿ ವೇಶ್ಯೆಯರಾಗಿ ಬದುಕಬೇಕಾದ ಅಸಂಖ್ಯಾತ ಹೆಣ್ಣುಮಕ್ಕಳ ಸಮಸ್ಯೆಯೂ ಆಗಿದ್ದಿರಬಹುದು ಎನಿಸುತ್ತದೆ.

ಪ್ರಭುತ್ವ ಮತ್ತು ಧರ್ಮ–ಈ ಎರಡೂ ವ್ಯವಸ್ಥೆಗಳೂ ತಮ್ಮ ಅಧಿಕಾರದ ನೆಲೆಗಳಿಂದ ಪ್ರಜೆಗಳ ಬದುಕನ್ನು ಅತಂತ್ರಗೊಳಿಸುತ್ತವೆ ಮತ್ತು ತಮ್ಮ ಸ್ವಾರ್ಥಕ್ಕಾಗಿ ಸಮಾಜದ ಯಾವ ನೀತಿ ನಿಯಮಗಳಿಗೂ ತಾವು ಬದ್ಧರಾಗಿರಬೇಕಾಗಿಲ್ಲ ಎಂಬಂಥ ಮನಸ್ಥಿತಿಯನ್ನು ಮಾಧವಿ ಅಲ್ಲಲ್ಲಿ ಪ್ರಶ್ನಿಸುತ್ತಲೇ ಹೋಗುತ್ತಾಳೆ. ಮಾಧವಿ ಹೀಗೆ ದುರಂತಗಳ ಸರಮಾಲೆಯನ್ನೇ ಬದುಕಿದರೂ, ತಾನು ನಿರಂತರವಾಗಿ ತನ್ನ ಇಷ್ಟಕ್ಕೆ ವಿರುದ್ಧವಾಗಿ ದೈಹಿಕ, ಮಾನಸಿಕ ಆಘಾತಕ್ಕೆ ಒಳಗಾಗುತ್ತಿದ್ದರೂ ಜಗತ್ತಿನ ಜೀವಗಳು (ವಿಶ್ವಾಮಿತ್ರರ ಶಿಷ್ಯರು) ಮರೆತು ಹೋಗಿದ್ದ ಮನುಷ್ಯ ಗುಣಗಳು ಹಿಂತಿರುಗಿ ಪಡೆದುಕೊಳ್ಳುವಂತೆ ಮಾಡಿದ್ದು, ಅವರಲ್ಲಿ ಬಾಡಿಹೋಗಿದ್ದ ಭಾವನೆಗಳನ್ನು ಅರಳಿಸಿಕೊಳ್ಳುವಂತೆ ಮಾಡಿದ್ದು (೨೮೦)–ಇವೆಲ್ಲ ಸಂದರ್ಭಗಳು ಬೂದಿಯಿಂದ ಮೈಕೊಡವಿ ಎದ್ದುಬರುವ ಫೀನಿಕ್ಸ್‌ನಂತೆ ಜೀವಪರವಾಗಿಯೇ ಯೋಚಿಸಬಲ್ಲ, ಬದುಕಬಲ್ಲ ಹೆಣ್ಣು ನಾಶವಾಗಲು ಸಾಧ್ಯವೇ ಇಲ್ಲ ಎಂಬ ಸತ್ಯವನ್ನು ಕಾದಂಬರಿ ಸಾಧಿಸುತ್ತದೆ.

ನಾಲ್ಕು ವರ್ಷಗಳ ಅವಧಿಯ ಬಳಿಕ ಹಿಂತಿರುಗಿದ ಆಕೆ ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ಹೆಣ್ಣಿನ ಆಸ್ತಿ ಎಂದು ಕರೆಯಲಾಗುತ್ತಿದ್ದ ಹೆಣ್ತನ, ತಾಯ್ತನವನ್ನು ಕಳೆದುಕೊಂಡಿದ್ದಾಳೆ. ಇನ್ನು ಅವು ಅವಳಲ್ಲಿ ಅಪರಿಚಿತ ಅನುಭವಗಳನ್ನಾಗಲಿ, ಆಸಕ್ತಿಯನ್ನಾಗಲಿ ಮೂಡಿಸಲಾರವು. ಆದರೆ ಇಷ್ಟು ಸಣ್ಣ ಅವಧಿಯಲ್ಲಿ ಅವಳು ಎದುರುಗೊಂಡ ವ್ಯಕ್ತಿಗಳು, ಅವರಿಂದ ಅವಳು ಕಲಿತ ಬದುಕಿನ ಪಾಠಗಳು ಅಪಾರ. ವಯಸ್ಸಿನಲ್ಲಿ ಆಕೆ ಆದಿಮನಿಗಿಂತ ಕಿರಿಯಳಾದರೂ ಅನುಭವದಲ್ಲಿ ಹಿರಿಯಳು. ಹೀಗಾಗಿಯೇ ತನ್ನ ಮತ್ತು ಆದಿಮನ ಭವಿಷ್ಯದ ಕುರಿತು ತೀರ್ಮಾನಕ್ಕೆ ಬರುವುದು ಆಕೆಗೆ ಸುಲಭವೆನಿಸುತ್ತದೆ. "ನನ್ನ ನಿನ್ನ ಒಡನಾಟ, ಸ್ನೇಹ, ಪ್ರೀತಿಗಳ ಸಂಬಂಧಕ್ಕೆ ಹೆಸರಿಡುವ ಹುಚ್ಚುತನ ಬೇಡ ಆದಿ–ಅದಕ್ಕೆ ಇರುವುದು ಒಂದೇ ಹೆಸರು....ಅದು ನನಗೂ ಕ್ಷೇಮ, ನಿನಗೂ ಕ್ಷೇಮ" (೩೧೫) ಎಂಬ ಮಾತಿನಲ್ಲಿ ಈ ಸಮಾಜ ಮಾಧವಿಯಂತಹ ಹೆಣ್ಣುಮಕ್ಕಳನ್ನು ಹೇಗೆ ನೋಡೀತು ಎಂಬ ಸಂಗತಿ ಅಡಗಿದೆ. ಅದೇ ಸಮಾಜದ ಭಾಗವಾಗಿರುವ ಆದಿಮ ಒಂದಲ್ಲ ಒಂದು ದಿನ ಆದರ್ಶದ ಪೊರೆಯೊಡೆದು ಹೊರಬಂದು ಬೇರೆಯೇ ರೂಪತಾಳಬಹುದು ಎಂಬ ಆತಂಕ ಇದೆ. ಈ ಹಿನ್ನೆಲೆಯಲ್ಲಿ ಆಕೆ ಅವನನ್ನು ಒಡನಾಡಿಯಾಗಿಯೇ ಉಳಿಸಿಕೊಳ್ಳುವ ಮನಸ್ಸು ಮಾಡುತ್ತಾಳೆಯೇ ಹೊರತು ಬಾಳಸಂಗಾತಿಯಾಗಲ್ಲ. ಕೊನೆಗೂ ಮಾಧವಿಯ ನಿರೀಕ್ಷೆಯಲ್ಲೇ ಆದಿಮ ಉಳಿಯುವುದರೊಂದಿಗೆ ಕಾದಂಬರಿ ಕೊನೆಗೊಳ್ಳುತ್ತದೆ.

ಹೀಗೆ ಅತ್ಯಂತ ವಾಸ್ತವದ ಮತ್ತು ಜೀವಪರವಾದ ನೆಲೆಯಲ್ಲಿ ಪುರಾಣದ ಮರುನಿರ್ವಚನ ಸಾಧ್ಯವಾಗಿದೆ. ಪುರಾಣದ ಕತೆಯೊಂದನ್ನು ಮರುನಿರ್ಮಿಸುವಾಗ ಅದರ ಅಂತಃಸತ್ವವನ್ನು ಉಳಿಸುವುದಕ್ಕೆ ಅಗತ್ಯವಾಗಿರುವ ಭಾಷಾನೈಪುಣ್ಯಕ್ಕೂ ಗಮನಕೊಟ್ಟಿದ್ದಾರೆ. ಅದ್ಭುತವಾದ ಶಾಬ್ದಿಕ ಶಕ್ತಿ ಕಥೆಯ ಓಘಕ್ಕೆ ನಿರಂತರತೆಯನ್ನು ಒದಗಿಸಿದೆ. ಕಾದಂಬರಿಯ ಲಕ್ಷ್ಮಿ, ಪಾರ್ವತಿ, ದೇವಯಾನಿ. ಶರ್ಮಿಷ್ಠೆ, ಹರ್ಯಶ್ವ ಮಹಾರಾಜನ ರಾಣಿ ಮೊದಲಾದ ಹೆಚ್ಚಿನ

ಹೆಣ್ಣು ಪಾತ್ರಗಳು ಮತ್ತು ಆದಿಮ, ಪುರು–ಪೊಳ್ಳು, ಸೋಗಲಾಡಿತನದ ಅವಾಸ್ತವಿಕ ಆದರ್ಶಗಳ ಮಾದರಿಗಳಾಗದೆ, ಜಾತಿ, ಅಂತಸ್ತು, ಸ್ಥಾನಮಾನಗಳನ್ನು ಮೀರುವ ಮಾನವೀಯವಾದ ನೆಲೆಯಲ್ಲಿ ಚಿತ್ರಿತವಾಗಿವೆ. ಗಂಡು–ಹೆಣ್ಣಿನ ಸಂಬಂಧದ ಹೊಸ ವಿನ್ಯಾಸವನ್ನು, ಹೆಣ್ಣಿನ ಫಲವಂತಿಕೆಗೆ ಹೊಸ ಅರ್ಥವನ್ನು, ಹೆಣ್ಣಿನ ಪ್ರತಿರೋಧಕ್ಕೆ ಹೊಸ ವ್ಯಾಖ್ಯಾನವನ್ನು ಇದು ನೀಡಿದೆ. ನಮ್ಮ, ನಿಮ್ಮ ಬದುಕನ್ನು ಪ್ರಭಾವಿಸಿದ ಮತ್ತು ಘಾಸಿಗೊಳಿಸಿದ ಸಂಗತಿಗಳು ಬರವಣಿಗೆಯಲ್ಲಿ ಪರ್ಯಾಯದ ಹುಡುಕಾಟಕ್ಕೆ ಕಾರಣವಾಗಿವೆ. ಇದರ ಅಂತಸ್ಸತ್ವವನ್ನು ಸ್ತ್ರೀವಾದಿ ತಾತ್ವಿಕತೆಯು ಗಟ್ಟಿಗೊಳಿಸಿದೆ. ಒಟ್ಟಿನಲ್ಲಿ, ಬರವಣಿಗೆಯ ವಿನ್ಯಾಸದಲ್ಲೇ ಪುರುಷಪರವೂ ಪುರುಷಪ್ರಧಾನವೂ ಆದ ಏಕಸ್ವಾಮ್ಯವು ಏರ್ಪಟ್ಟಿರುವಾಗ ನಮ್ಮ ಪುರಾಣಗಳು, ಚರಿತ್ರೆಯ ಬರವಣಿಗೆಗಳು ಹೆಣ್ಣನ್ನು ಗೈರುಮಾಡಿ, ಪುರುಷರ ಕಣ್ಣಿಂದ ಚಿತ್ರಿಸಿವೆಯೇ ಹೊರತು ಅವಳ ಕುರಿತ ಮಾನವೀಯ ಕಾಳಜಿಯಿಂದಲ್ಲ. ಅಧಿಕಾರದ ತುತ್ತತುದಿಯಲ್ಲು ಪುರುಷರನ್ನೇ ವಿಜೃಂಭಿಸಿ ಕಾಣಿಸಿ, ಅವರ ಜೈತ್ರಯಾತ್ರೆಗಳನ್ನೇ ಹಾಡಿಹೊಗಳಿವೆ. ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸಿಕೊಳ್ಳುವ ಮಹಿಳೆಯರು ಕೂಡ ಪುರುಷರ ದಮನನೀತಿಯಲ್ಲಿ ಉಡುಗಿ ಹೋಗಿದ್ದಾರೆ.

***

**ಪರಾಮರ್ಶನ ಗ್ರಂಥಗಳು**

೧. ಕಪ್ಪು ಕಿವಿಯ ಬಿಳಿಯ ಕುದುರೆಗಳು;ಎಂ.ಎಸ್.ವೇದಾ; ಸಂವಹನ, ಮೈಸೂರು, ೨೦೦೭

೨. ಮಾಧವಿ; ಅನುಪಮಾ ನಿರಂಜನ; ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೬